## ಒಂದನೇ ತರಗತಿ

| ಅವಧಿ (1) | ಸಮಯ ಪಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (3) | ಸಾಮರ್ಥ್ಯದ ವಿವರ (4) | ಬಳಸ ಬಹುದಾದ ಕಲಿಕಾ ಸಾಮಗ್ರಿ (5) | ನಿರ್ವಹಣೆ (6) | ಕಲಿಕಾ ಪ್ರಕ್ರಿಯೆ (7) |
|---|---|---|---|---|---|---|
| 1ನೇ ಅವಧಿ | 10ನಿ | ಭಾಷೆ – ಸಣ್ಣಿ ಮದುವೆ | ಸರಳ ಹಾಗೂ ಬಳಕೆಯ–ಲ್ಲಿರುವ ಜನಪ್ರಿಯ ಪ್ರಾಸಗೀತೆ ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥ ಮಾಡಿಕೊಳ್ಳುವುದು. | ಪ್ರಾಸಗೀತೆ, ಪ್ರಾಸಗೀತೆಗಳು | ಶಿಕ್ಷಕರು | ಪೂ.ಸಿ.ಚ.<br>"ಹಕ್ಕಿ ಚಿಲಿಪಿಲಿ ಗಿಲಕಿ ಗಿಲಿಗಿಲಿ" ಎಂಬ ಪ್ರಾಸ ಗೀತೆಯನ್ನು ಹೇಳಿಕೊಡುವರು. |
| | 30ನಿ | | | | ಶಿಕ್ಷಕರು | "ಕಪ್ಪೆ ಕರಕರ ತುಪ್ಪ ಜಲಿಜಲಿ" ಪದ್ಯವನ್ನು ಸಾಮೂಹಿಕವಾಗಿ ಹಾಡಿಸುವರು.<br>ಇನ್ನಿತರ ಸರಳ ಕವನಗಳನ್ನು ಮಕ್ಕಳಿಗೆ ಹೇಳಿಕೊಡುವರು. |
| | 10ನಿ | | | ಧ್ವನಿ ಸುರುಳಿ | ಶಿಕ್ಷಕರು | ಶಿಕ್ಷಕರು ಮುಂದಿನ ಚಟುವಟಿಕೆಗೆ ಅಗತ್ಯ ಸೂಚನೆ ನೀಡುವರು. |
| | 30ನಿ | | | | ಹಿರೇಮಣಿ | ಶಿಶುಗೀತೆಗಳ ಧ್ವನಿ ಸುರುಳಿಯನ್ನು ಆಲಿಸುವ ವ್ಯವಸ್ಥೆ ಮಾಡುವರು.<br>ಮಕ್ಕಳು "ಹುಯ್ಯೋ ಹುಯ್ಯೋ ಮಳೆರಾಯ" ಧ್ವನಿ ಸುರುಳಿಯನ್ನು ಆಲಿಸುವರು.<br>ಕಥಾ ಕಾರ್ಡ್‌ಗಳನ್ನು ವೀಕ್ಷಿಸಲು ಕೊಡುವರು. |
| 2ನೇ ಅವಧಿ | 10ನಿ | ಗಣಿತ – ಸಂಖ್ಯೆಗಳು | ಮೊತ್ತ 9 ಕ್ಕೆ ಮೀರದಂತೆ ಚಿತ್ರ ಮತ್ತು ವಸ್ತು ಬಳಸಿ ಸಂಕಲನ ಮಾಡುವರು. | | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–**<br>'ಒಂದು ಕಾಗೆ ಬಂದಿತು' ಹಾಡು ಹೇಳಿಕೊಡುವರು. |
| | 30ನಿ | | | | ಶಿಕ್ಷಕರು | ಹಿರೇಮಣಿಯ ನೆರವಿನಿಂದ 1–9 ರವರೆಗೆ ಅಂಕಿಗಳನ್ನು ಮಕ್ಕಳು ವೈಯಕ್ತಿಕವಾಗಿ ಬರೆಯುವಂತೆ ಮಕ್ಕಳಿಗೆ ಸೂಚನೆಗಳನ್ನು ನೀಡುವರು.<br>ಶಿಕ್ಷಕರು ಸೂಚನೆಯನುಸಾರ ಮಕ್ಕಳು ಅಂಕಿಗಳನ್ನು ಬರೆಯುವರು. |
| | 10ನಿ | | | ಕಲ್ಲುಗಳು, ಕಡ್ಡಿಗಳು, ಬೀಜಗಳು | ಶಿಕ್ಷಕರು | ಮಕ್ಕಳು ಸಂಕಲನದ ಕಲಿಕೆಗೆ ಸಿದ್ದರಾಗುವರು. |
| | 30ನಿ | | | | ಶಿಕ್ಷಕರು | ಸ್ಥಳೀಯ ಲಭ್ಯ ಸಾಮಗ್ರಿಗಳನ್ನು ಸಂಗ್ರಹಿಸಿ ಮಕ್ಕಳನ್ನು ವೃತ್ತಾಕಾರವಾಗಿ ಕೂಡಿಸಿ, ಅವರಿಗೆ ಕಲ್ಲು, ಕಡ್ಡಿಗಳನ್ನು ನೀಡುವರು. ನಂತರ ಒಬ್ಬೊಬ್ಬರನ್ನೇ ಕರೆದು ಒಂದು ಕಲ್ಲನ್ನು ತೆಗೆದುಕೊಂಡು ನಂತರ ಎರಡು ಕಲ್ಲುಗಳನ್ನು ತೆಗೆದುಕೋ ಅವುಗಳನ್ನು ಕೂಡಿಸಿ ಈಗ ಒಟ್ಟು ಎಷ್ಟಾಯಿತು ? ಈ ರೀತಿ ಪ್ರಶ್ನಿಸಿ ಸಂಕಲನದ ಪರಿಕಲ್ಪನೆ ಮೂಡಿಸುವರು. |

## ಎರಡನೇ ತರಗತಿ

| ಅವಧಿ | ಸಮಯ ಪಂಚಿಕೆ | ವಿಷಯ ಮತ್ತು ಪಾಠದ ಹೆಸರು (8) | ಸಾಮರ್ಥ್ಯದ ವಿವರ (9) | ಬಳಸ ಬಹುದಾದ ಕಲಿಕಾ ಸಾಮಗ್ರಿ (10) | ನಿರ್ವಹಣೆ (11) | ಕಲಿಕಾ ಪ್ರಕ್ರಿಯೆ (12) |
|---|---|---|---|---|---|---|
| 1ನೇ ಅವಧಿ | 10ನಿ | ಭಾಷೆ – ಲಚ್ಚಿಯ ಮೆಚ್ಚಿನ ದೋಣಿ | ಸಂಯುಕ್ತಾಕ್ಷರ ಪದಗಳು ಮತ್ತು ವಾಕ್ಯಗಳನ್ನು ಗುರ್ತಿಸಿ ಉಚ್ಚರಿಸುವುದು ಮತ್ತು ನಕಲು ಮಾಡುವುದು. | ಪ್ರಶ್ನೋತ್ತರಗಳ ಸಂಗ್ರಹ | ಶಿಕ್ಷಕರು | **ಪೂ.ಸಿ.ಚ.**<br>1 ನೇ ತರಗತಿಯವರೊಂದಿಗೆ ಪಾಲ್ಗೊಳ್ಳುವರು. |
| | 30ನಿ | | | | ಹಿರೇಮಣಿ | ಕಪ್ಪು ಹಲಗೆಯಲ್ಲಿ ಬರೆದಿರುವ ಪ್ರಶ್ನೋತ್ತರಗಳನ್ನು ಮಕ್ಕಳು ತಮ್ಮ ಅಭ್ಯಾಸ ಪುಸ್ತಕಕ್ಕೆ ನಕಲು ಮಾಡಿಕೊಳ್ಳುವಂತೆ ಶಿಕ್ಷಕರು ಸೂಚಿಸುವರು.<br>ಮಕ್ಕಳು ಸೂಚನೆಯನ್ನು ಪಾಲಿಸುವರು. |
| | 10ನಿ | | | ಒತ್ತಕ್ಷರ ಪದಗಳ ಪಟ್ಟಿ | ಶಿಕ್ಷಕರು | ಶಿಕ್ಷಕರು ಮಕ್ಕಳ ಬರವಣಿಗೆ ಪರಿಶೀಲಿಸುವರು. |
| | 30ನಿ | | | | ಶಿಕ್ಷಕರು | ಗುಣಿತಾಕ್ಷರ ಮತ್ತು ಒತ್ತಕ್ಷರಗಳ ಪದಗಳಲ್ಲಿ ಮಕ್ಕಳು ಸಾಮಾನ್ಯವಾಗಿ ಮಾಡುವ ದೋಷಗಳನ್ನು ಗುರ್ತಿಸಿ ತಿದ್ದುವರು. ಸರಿಯಾಗಿ ಬರೆಯುವ ಕ್ರಮಗಳನ್ನು ಕಲಿಸುಸುವರು.<br>ಉದಾ :– ಅಚ್ಚು – ಮೆಚ್ಚು, ನಿಶ್ಚಿಂತೆ, ಕೊಚ್ಚಿಹೋಗು, ಇತ್ಯಾದಿ. |
| 2ನೇ ಅವಧಿ | 10ನಿ | ಗಣಿತ – ಸಂಕಲನ | ದಶಕವಿರುವಂತೆ ಎರಡಂಕಿಯ ಎರಡು ಅಥವಾ ಮೂರು ಸಂಖ್ಯೆಗಳ ಸಂಕಲನ | ಹಾಡು, ಹತ್ತರ ಕಟ್ಟು ಮತ್ತು ಬಿಡಿಗಳು | ಶಿಕ್ಷಕರು | **ಪೂ.ಸಿ.ಚ.**<br>ಒಂದನೇ ತರಗತಿಯವರೊಂದಿಗೆ ಹಾಡುವರು. |
| | 30ನಿ | | | | ಶಿಕ್ಷಕರು | ಅಭ್ಯಾಸ ಪುಸ್ತಕದ ಪುಟಸಂಖ್ಯೆ 77 ರ ಚಟುವಟಿಕೆ –1 ನ್ನು ಶಿಕ್ಷಕರು ಮಾಡುವರು. |
| | 10ನಿ | ಲಲಿತ ಕಲೆ "ಹೆಬ್ಬೆರಳಿನಿಂದ ಚಿತ್ರರಚನೆ" | * ತಮ್ಮ ಕಲ್ಪನೆಗೆ ಅನ್ವಯವಾಗುವ ವಿವಿಧ ಚಿತ್ರಗಳನ್ನು ತಯಾರಿಸುವ ಸಾಮರ್ಥ್ಯ | ಹಾಡು, ಬಣ್ಣ (water colours) ಡ್ರಾಯಿಂಗ್ ಹಾಳೆ | ಶಿಕ್ಷಕರು | ಶಿಕ್ಷಕರು ಮಕ್ಕಳನ್ನು ಗುಂಪುಗಳಲ್ಲಿ ಕೂರಿಸಿ ಪ್ರತಿ ಗುಂಪಿಗೆ ಬಣ್ಣ ತುಂಬಿದ ಬಟ್ಟಲುಗಳನ್ನು ವಿತರಿಸುವರು.<br>ನಂತರ ಹೆಬ್ಬೆರಳಿನಿಂದ ವಿವಿಧ ಚಿತ್ರಗಳನ್ನು ತಯಾರಿಸುವ ವಿಧಾನವನ್ನು ಮಾದರಿಯಾಗಿ ತೋರಿಸಿ ನಂತರ ಅಗತ್ಯ ಮಾರ್ಗ ದರ್ಶನದೊಂದಿಗೆ, ಮಕ್ಕಳಿಂದ ಚಟುವಟಿಕೆ ಮಾಡಿಸುವರು. |
| | 30ನಿ | | | | ಹಿರೇಮಣಿ | ಮಕ್ಕಳು ಶಿಕ್ಷಕರ ಸೂಚನೆಯಂತೆ ಚಿತ್ರಗಳನ್ನು ತಯಾರಿಸುವರು. |

## ಐದನೇ ತರಗತಿ

| ಅವಧಿ | ಸಮಯ ಪಂಚಿಕೆ | ವಿಷಯ ಮತ್ತು ಪಾಠದ ಹೆಸರು (13) | ಸಾಮರ್ಥ್ಯದ ವಿವರ (14) | ಬಳಸ ಬಹುದಾದ ಕಲಿಕಾ ಸಾಮಗ್ರಿ (15) | ನಿರ್ವಹಣೆ (16) | ಕಲಿಕಾ ಪ್ರಕ್ರಿಯೆ (17) |
|---|---|---|---|---|---|---|
| 1ನೇ ಅವಧಿ | 10ನಿ | – | – | – | – | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | – | |
| | 10ನಿ | – | – | – | – | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | – | |
| 2ನೇ ಅವಧಿ | 10ನಿ | – | – | – | – | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | – | |
| | 10ನಿ | – | – | – | – | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | – | |

**ಒಂದನೇ ತರಗತಿ**

| ಅವಧಿ | ಸಮಯ ಪಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 3 | 4 | 5 | 6 | 7 |
| 3ನೇ ಅವಧಿ | 10ನಿ | ಮೌಲ್ಯ ಶಿಕ್ಷಣ | ವೈಯಕ್ತಿಕ ಮೌಲ್ಯಗಳನ್ನು ರೂಢಿಸಿಕೊಳ್ಳುವ ಬಗ್ಗೆ ಅರಿವು ಮೂಡಿಸುವುದು. | ನೀತಿಕಥೆಗಳ ಸಂಗ್ರಹ | ಶಿಕ್ಷಕರು | ಶಿಕ್ಷಕರು ಪ್ರಾಮಾಣಿಕತೆಯನ್ನು ನಿರೂಪಿಸುವಂತಹ ಕಥೆಯನ್ನು ಹೇಳುವರು.<br>ಉದಾ :–ಪ್ರಾಮಾಣಿಕ ನಾಯಿ |
| | 30ನಿ | | | | ಶಿಕ್ಷಕರು | ಮಕ್ಕಳು ಕಥೆ ಕೇಳುವರು. |
| | 10ನಿ | ಭಾಷೆ – ಸಣ್ಣೆ ಮದುವೆ | ಸರಳ ಹಾಗೂ ಬಳಕೆಯಲ್ಲಿರುವ ಗೀತೆಗಳನ್ನು, ಕಥೆಗಳನ್ನು ಆಲಿಸಿ ಅರ್ಥ ಮಾಡಿಕೊಳ್ಳುವುದು | ಧ್ವನಿ ಸುರುಳಿ | ಶಿಕ್ಷಕರು | ಮಕ್ಕಳಿಗೆ ಧ್ವನಿ ಸುರುಳಿ ಆಲಿಸುವ ಬಗ್ಗೆ ಮಾರ್ಗದರ್ಶನ ನೀಡುವರು |
| | 30ನಿ | | | | ಹಿರೇಮಣಿ | ಕಥೆಯ ಧ್ವನಿ ಸುರಳಿಯನ್ನು ಮಕ್ಕಳು ಆಲಿಸುವಂತೆ ಮಕ್ಕಳನ್ನು ಸಜ್ಜುಗೊಳಿಸುವರು.<br>ಮಕ್ಕಳು ಕಥೆಗಳನ್ನು ಆಲಿಸುವರು. |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ನಮ್ಮ ದೇಹ | ದೇಹದ ಮುಖ್ಯ ಭಾಗಗಳನ್ನು ಗುರುತಿಸುವರು. | ಕತ್ತರಿಸಿದ ಚಿತ್ರ – ದೇಹದ ಭಾಗಗಳು | ಶಿಕ್ಷಕರು | **ಪೂ.ಸಿ.ಚ.**<br>2 ನೇ ತರಗತಿಯ ಮಕ್ಕಳೊಂದಿಗೆ ಸೇರಿ ಹಾಡನ್ನು ಹಾಡುವರು. (ಶಿಕ್ಷಕರು ಹಾಡನ್ನು ಹೇಳಿಕೊಡುವರು) |
| | 30ನಿ | | | | ಹಿರೇಮಣಿ | ಚಿತ್ರದಲ್ಲಿ ದೇಹದ ಭಾಗಗಳನ್ನು ಜೋಡಿಸುವ ಚಟುವಟಿಕೆ ಮಾಡುವರು. |
| | 10ನಿ | | | ಹಾಡು | ಶಿಕ್ಷಕರು | ನಮ್ಮ ಆಹಾರಕ್ಕೆ ಸಂಬಂಧಿಸಿದ ಹಾಡನ್ನು ಹಾಡುವಂತೆ ಮಕ್ಕಳಿಗೆ ಸೂಚನೆಯನ್ನು ನೀಡುವರು.<br>ನಮ್ಮ ಆಹಾರದ ಬಗ್ಗೆ ಒಂದು ಸಣ್ಣ ಹಾಡನ್ನು ಹೇಳಿಕೊಡುವರು<br>ಉದಾ :– ("ಗುಂಡಾಡಿ ಗುಂಡ, ಅತ್ತೆಮನೆಗೆ ಹೊದ, 10 ಲಾಡು ತಿಂದ ಹೊಟ್ಟೆನೊವು ಎಂದ" ಇದನ್ನು ಮುಂದುವರೆಸಿಕೊಂಡು ಹೇಗುವರು) |
| | 30ನಿ | | | | ಶಿಕ್ಷಕರು | ಮಗುವಿಗೆ ಇಷ್ಟವಾದ ಆಹಾರವನ್ನು ಪಟ್ಟಿಮಾಡುವರು. ಅದರಲ್ಲಿ ಮಗುವಿಗೆ ಬಹಳ ಇಷ್ಟವಾದ ಆಹಾರವನ್ನು ಪಟ್ಟಿಮಾಡಿಸುವರು.<br>ಇದೇ ರೀತಿಯಾಗಿ ಪ್ರಾಣಿಗಳಿಗೂ ಕೂಡ ಆಹಾರದ ಅವಶ್ಯಕತೆ ಇದೆ ಎಂಬುದನ್ನು ತಿಳಿಸುವರು.<br>ಆಹಾರದ ಅವಶ್ಯಕತೆ ಬಗ್ಗೆ ತಿಳಿಸುವರು. |

**ಎರಡನೇ ತರಗತಿ**

| ಅವಧಿ | ಸಮಯ ಪಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 8 | 9 | 10 | 11 | 12 |
| 3ನೇ ಅವಧಿ | 10ನಿ | ಮೌಲ್ಯ ಶಿಕ್ಷಣ | | | ಶಿಕ್ಷಕರು | ಒಂದನೆ ತರಗತಿ ಮಕ್ಕಳ ಜೊತೆ ಚಟುವಟಿಕೆಯಲ್ಲಿ 2 ನೇ ತರಗತಿಯ ಮಕ್ಕಳು ಭಾಗವಹಿಸುವರು. |
| | 30ನಿ | | | | ಶಿಕ್ಷಕರು | ಕಥೆ ಕೇಳುವರು. |
| | 10ನಿ | ಸಾ.ಉ.ಉ.ಕಾ. | ಆಟಕ್ಕಾಗಿ ಹಾಗೂ ಅವಶ್ಯಕತೆಗಾಗಿ ವಸುಗಳನ್ನು ತಯಾರಿಸುವ ಕೌಶಲವನ್ನು ತಿಳಿಯುವುದು. | ಜೇಡಿಮಣ್ಣು | ಶಿಕ್ಷಕರು | ಜೇಡಿ ಮಣ್ಣಿನಿಂದ ಗೋಲಿಗಳನ್ನು ತಯಾರಿಸಲು ಶಿಕ್ಷಕರು ಸೂಚನೆ ನೀಡುವರು. |
| | 30ನಿ | | | | ಹಿರೇಮಣಿ | ಮಕ್ಕಳು ಹಿರೇಮಣಿಯ ನೆರವಿನಿಂದ ಜೇಡಿಮಣ್ಣಿನಿಂದ ಗೋಲಿಗಳನ್ನು ಮಾಡುವರು. |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ನಮ್ಮ ಸುತ್ತಮುತ್ತ | 1.ಮನುಷ್ಯ ಮತ್ತು ಪರಿಸರದ ಪರಸ್ಪರ ಸಂಬಂಧಗಳನ್ನು ಅರಿಯುವರು.<br>2.ಸ್ಥಳೀಯ ಪರಿಸರಗಳ ಬಗ್ಗೆ ಮಾಹಿತಿ ಪಡೆಯುವರು. | ಆಲ್ಬಂ, ಮಿಂಚುಪಟ್ಟಿಗಳು | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–**<br>"ಅಮ್ಮ ನನಗೆ ಪುಟ್ಟದೊಂದು ಬೊಂಬೆ ತಂದ್ಕೊಡೆ" ಎಂಬ ಹಾಡನ್ನು ಹೇಳಿಕೊಡುವರು. |
| | 30ನಿ | | | | ಹಿರೇಮಣಿ | ಮಕ್ಕಳಿಗೆ ಶಿಕ್ಷಕರು ಕಾಡಿನ ಬಗ್ಗೆ ಸಂಗ್ರಹಿಸಿದ ಚಿತ್ರಗಳು, ಪ್ರಾಣಿಗಳ ಆಲ್ಬಂ ಹಾಗೂ ಘೋಷಣೆಗಳ ಮಿಂಚು ಪಟ್ಟಿಗಳನ್ನು ನೀಡಿ ವೀಕ್ಷಿಸಲು ಹೇಳುವರು. ಮಕ್ಕಳು ಅದರಂತೆಯೇ ಗುಂಪಿನಲ್ಲಿ ಕುಳಿತು ಹಿರೇಮಣಿಯ ಸಹಾಯದಿಂದ ವೀಕ್ಷಿಸುವರು. |
| | 10ನಿ | ಸಾ.ಉ.ಉ.ಕಾ. | ಆಟಕ್ಕಾಗಿ ಹಾಗು ಅವಶ್ಯಕವಾದ ವಸುಗಳನ್ನು ತಯಾರಿಸುವ ಕೌಶಲವನ್ನು ತಿಳಿಯುವುದು. | ಜೇಡಿಮಣ್ಣು ನೀರು ಬಣ್ಣ | ಶಿಕ್ಷಕರು | ವಿವಿಧ ಗಾತ್ರದ ಮತ್ತು ವಿವಿಧ ರೀತಿಯ (ಆಕಾರದ) ಪಾತ್ರೆಗಳನ್ನು ಜೇಡಿಮಣ್ಣಿನಿಂದ ತಯಾರಿಸುವುದನ್ನು ತೋರಿಸಿಕೊಡುವರು. ನಂತರ ಮಕ್ಕಳಿಗೆ ತಯಾರಿಸಲು ಸೂಚನೆ ನೀಡುವರು. |
| | 30ನಿ | | | | ಹಿರೇಮಣಿ | ಮಕ್ಕಳು ಜೇಡಿಮಣ್ಣಿನಿಂದ ವಿವಿಧ ಆಕಾರದ ಪಾತ್ರೆಗಳನ್ನು ಮಾಡುವರು. |

**ಐದನೇ ತರಗತಿ**

| ಅವಧಿ | ಸಮಯ ಪಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 13 | 14 | 15 | 16 | 17 |
| 3ನೇ ಅವಧಿ | 10ನಿ | ಭಾಷೆ – ಮಲೆನಾಡ ಸಿರಿ : ಜಲಪಾತ | ಅಪರಿಚಿತ ಸನ್ನಿವೇಶಗಳನ್ನು ಸಂಭಾಷಣೆ, ಸಂವಾದ, ಚರ್ಚೆಗಳ ಮೂಲಕ ಅರ್ಥ ಮಾಡಿಕೊಳ್ಳುವುದು | ಪಠ್ಯ ಪುಸ್ತಕ | ಶಿಕ್ಷಕರು | **ಪೂ.ಸಿ.ಚ.**<br>1 ಮತ್ತು 2 ನೇ ತರಗತಿಯವರೊಂದಿಗೆ ಕಥೆ ಹೇಳುವರು. |
| | 30ನಿ | | | | ಹಿರೇಮಣಿ | ಹಿರೇಮಣಿಯು ಪಠ್ಯ ಪುಸ್ತಕದಲ್ಲಿನ ಪಠ್ಯ ಭಾಗವನ್ನು ಮೌನ ವಾಚನ ಮಾಡಲು ಸೂಚಿಸುವರು.<br>ಮಕ್ಕಳು ಆ ಪಠ್ಯ ಭಾಗವನ್ನು ಮೌನ ವಾಚನ ಮಾಡುವರು. |
| | 10ನಿ | | | | ಶಿಕ್ಷಕರು | ಮಕ್ಕಳ ಓದುವಿಕೆಯನ್ನು ಪರಿಶೀಲಿಸುವರು. |
| | 30ನಿ | | | | ಶಿಕ್ಷಕರು | ಮಲೆನಾಡ ಸಿರಿ ಪಠ್ಯ ಭಾಗವನ್ನು ಮಾದರಿ ವಾಚನ ಮಾಡುವರು. ಮಕ್ಕಳಿಂದ ಪುನಃ ಓದಿಸುವರು. ಓದಿದ ಪಠ್ಯ ಭಾಗಕ್ಕೆ ಸಂಬಂಧಿಸಿದಂತೆ ಕಿರು ಪ್ರಶ್ನೆಗಳನ್ನು ಹಾಕಿ ಮಕ್ಕಳಿಂದಲೇ ವಿವರಣೆ ನೀಡುವರು.<br>ಉದಾ :– ಶಾಲಾ ಮಕ್ಕಳು ಎಲ್ಲಿಗೆ ಪ್ರವಾಸ ಹೊರಟರು ?<br>ಪರ್ವತದ ತಪ್ಪಲಿನಲ್ಲಿರುವ ಸುಂದರ ಊರು ಯಾವುದು ? |
| 4ನೇ ಅವಧಿ | 10ನಿ | ಸಾಮಾನ್ಯ ವಿಜ್ಞಾನ<br>ಪೃಥ್ವಿಯ ಭೂ ಸ್ವರೂಪಗಳು | ಭೂ ಸ್ವರೂಪಗಳು ಪರ್ವತಗಳು, ಬೆಟ್ಟಗಳು, ಕಣಿವೆಗಳು | ಪರ್ವತಗಳು, ಬೆಟ್ಟಗಳು, ಕಣಿವೆಗಳ ಚಿತ್ರಗಳು | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಕಲಿತ ವಿಷಯದ ಬಗ್ಗೆ ಪ್ರಶ್ನೆಗಳನ್ನು ಕೇಳುವರು. |
| | 30ನಿ | | | | ಶಿಕ್ಷಕರು | * ಚಿತ್ರಗಳನ್ನು ಮಕ್ಕಳ ಮುಂದೆ ಪ್ರದರ್ಶಿಸಿ, ಬೆಟ್ಟಗಳು ಮತ್ತು ಪರ್ವತಗಳ ಲಕ್ಷಣಗಳ ಬಗ್ಗೆ ಚರ್ಚಿಸುವರು. ಅವುಗಳ ನಡುವಿನ ವ್ಯತ್ಯಾಸ ಗುರ್ತಿಸುವರು.<br>* ಕಣಿವೆಗಳ ಚಿತ್ರಗಳನ್ನು ಬಳಸಿ ಅವುಗಳ ಲಕ್ಷಣಗಳ ಬಗ್ಗೆ ವಿವರಣೆ ನೀಡುವರು. |
| | 10ನಿ | ಸಮಾಜ ವಿಜ್ಞಾನ<br>ಪೌರನೀತಿಯ ಪ್ರಾಮುಖ್ಯತೆ | ಉತ್ತಮ ಪೌರನ ಲಕ್ಷಣಗಳನ್ನು ಅರಿತು ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವುದು | ಧ್ವನಿ ಸುರುಳಿ | ಶಿಕ್ಷಕರು | ಮಕ್ಕಳು ದೇಶಭಕ್ತಿ – ದೇಶಭಕ್ತರುಗಳಿಗೆ ಸಂಬಂಧಿಸಿದ ಧ್ವನಿ ಸುರುಳಿಯನ್ನು ಆಲಿಸಲು ವ್ಯವಸ್ಥೆ ಮಾಡುವರು.<br>ಮಕ್ಕಳು ವೃತ್ತಾಕಾರವಾಗಿ ಕುಳಿತು ಧ್ವನಿ ಸುರುಳಿಯನ್ನು ಆಲಿಸುವರು. |
| | 30ನಿ | | | | ಹಿರೇಮಣಿ | "ಜಯತೇ ಜಯತೇ ಜಯತೇ" (ಹಾಡು)<br>"ಇದೇನಾ ಸಂಸ್ಕೃತಿ ಇದೇನಾ ಸಭ್ಯತೆ" (ಹಾಡು)<br>"ಜಯಭಾರತ ಜನನಿಯ ತನುಜಾತೆ" (ಹಾಡು) |

## ಒಂದನೇ ತರಗತಿ

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (3) | ಸಾಮರ್ಥ್ಯದ ವಿವರ (4) | ಬಳಸ ಬಹುದಾದ ಕಲಿಕಾ ಸಾಮಗ್ರಿ (5) | ನಿರ್ವಹಣೆ (6) | ಕಲಿಕಾ ಪ್ರಕ್ರಿಯೆ (7) |
|---|---|---|---|---|---|---|
| 1ನೇ ಅವಧಿ | 10ನಿ | ಭಾಷೆ – ಸಣ್ಣಿ ಮದುವೆ | ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗೀತೆ ಮತ್ತು ಕಥೆಗಳನ್ನು ಆಲಿಸುವುದರ ಜೊತೆ ಅರ್ಥ ಮಾಡಿಕೊಳ್ಳುವರು. | ಪ್ರಶ್ನಾವಳಿ ಕಾರ್ಡ್ | ಶಿಕ್ಷಕರು | **ಪೂ.ಸಿ.ಚ.**<br>ಸರಳ ಪ್ರಾಸ ಗೀತೆಯನ್ನು ಹಾಡಿಸುವರು. |
| | 30ನಿ | | | | ಶಿಕ್ಷಕರು | ಹಿಂದಿನ ಅವಧಿಗಳಲ್ಲಿ ಮಕ್ಕಳು ಆಲಿಸುವ ಶಿಶುಗೀತೆಗಳು ಮತ್ತು ಕಥೆಗಳ ಬಗ್ಗೆ ಸರಳ ಪ್ರಶ್ನೆಗಳನ್ನು ಹಾಕಿ ಉತ್ತರ ಪಡೆಯುವರು. |
| | 10ನಿ | ಭಾಷೆ ಪದ ಓದು ಅಕ್ಷರ ಕಲಿ ಹಂತ 2, 3, 4 | ವರ್ಣಮಾಲೆಯ ಸರಳ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರ್ತಿಸುವರು. | ಶಿಶು ಗೀತೆಗಳು | ಶಿಕ್ಷಕರು | ಮಕ್ಕಳಿಗೆ ಸೂಚನೆಗಳನ್ನು ನೀಡುವರು. |
| | 30ನಿ | | | | ಹಿರೇಮಣಿ | ಮಕ್ಕಳು ಗುಂಪುಗಳಲ್ಲಿ ಕುಳಿತು ಕಥಾ ಕಾರ್ಡುಗಳನ್ನು ನೋಡಿ ಸರಳ ಕಥೆಗಳನ್ನು ಮತ್ತು ಶಿಶುಗೀತೆಗಳನ್ನು ಹಾಡುವರು.<br>ಉದಾ :– ನರಿ ಮತ್ತು ಕಾಗೆ<br>ಕೊಕ್ಕರೆ – ಕೊಕ್ಕರೆ ಪ್ರಾಸ ಪದ್ಯ. |
| 2ನೇ ಅವಧಿ | 10ನಿ | ಗಣಿತ – ಸಂಕಲನ | ಮೊತ್ತ 9 ಕ್ಕೆ ಮೀರದಂತೆ ಚಿತ್ರ ಮತ್ತು ವಸ್ತು ಬಳಸಿ ಸಂಕಲನ ಮಾಡುವರು. | ಚಿತ್ರಗಳು ಸ್ಥಳೀಯವಾಗಿ ಲಭ್ಯ ಸಾಮಗ್ರಿಗಳು | ಶಿಕ್ಷಕರು | ಪೂ.ಸಿ.ಚ.<br>ಸಂಕಲನದ ಹಾಡು ಹಾಡುವರು. |
| | 30ನಿ | | | | ಶಿಕ್ಷಕರು | *ಅಭ್ಯಾಸ ಪುಸ್ತಕದ ಪುಟ ಸಂಖ್ಯೆ 54 ಮತ್ತು 55 ರ ಚಿತ್ರಗಳನ್ನು ಬಳಸಿ ಸಂಕಲನದ ಪರಿಕಲ್ಪನೆಯನ್ನು ಮನದಟ್ಟು ಮಾಡಿಸುವರು.<br>* ವಸ್ತುಗಳನ್ನು ಬಳಸಿ ಸಂಕಲನ ಮಾಡಿಸುವರು.<br>ಉದಾ :– * + * + * = 3 |
| | 10ನಿ | ಲಲಿತ ಕಲೆ | ಸರಳವಾಗಿ ಮತ್ತು ರಾಗವಾಗಿ ಹಾಡುವ ಕೌಶಲ್ಯವನ್ನು ಬೆಳೆಸುವುದು. | | ಶಿಕ್ಷಕರು | ಪಠ್ಯ ಪುಸ್ತಕದಲ್ಲಿನ ಪದ್ಯಗಳನ್ನು ವೈಯಕ್ತಿಕವಾಗಿ ಹಾಡಲು ಶಿಕ್ಷಕರು ಸೂಚಿಸುವರು. |
| | 30ನಿ | | | | ಹಿರೇಮಣಿ | ಮಕ್ಕಳು ಸೂಚನೆಯನ್ನುನುಸರಿಸಿ ಪದ್ಯವನ್ನು ಹಾಡುವರು. |

## ಎರಡನೇ ತರಗತಿ

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (8) | ಸಾಮರ್ಥ್ಯದ ವಿವರ (9) | ಬಳಸ ಬಹುದಾದ ಕಲಿಕಾ ಸಾಮಗ್ರಿ (10) | ನಿರ್ವಹಣೆ (11) | ಕಲಿಕಾ ಪ್ರಕ್ರಿಯೆ (12) |
|---|---|---|---|---|---|---|
| 1ನೇ ಅವಧಿ | 10ನಿ | ಭಾಷೆ – ಲಚ್ಚಿಯ ಮೆಚ್ಚಿನ ದೋಣಿ | ಸಂಯುಕ್ತಾಕ್ಷರ ಪದಗಳು ಮತ್ತು ವಾಕ್ಯಗಳನ್ನು ಗುರ್ತಿಸಿ ಉಚ್ಚರಿಸುವುದು ಮತ್ತು ನಕಲು ಮಾಡುವುದು. | ಹೊಸ ಪದಗಳ ಪಟ್ಟಿ | ಶಿಕ್ಷಕರು | ಪೂ.ಸಿ.ಚ.<br>1 ನೇ ತರಗತಿಯವರೊಂದಿಗೆ ಪಾಲ್ಗೊಳ್ಳುವರು. |
| | 30ನಿ | | | | ಹಿರೇಮಣಿ | ಹಿಂದಿನ ಅವಧಿಯಲ್ಲಿ ಬರೆದುಕೊಂಡ ಪಠ್ಯದ ಪ್ರಶ್ನೋತ್ತರಗಳನ್ನು ಮೌಖಿಕವಾಗಿ ಅಭ್ಯಾಸ ಮಾಡಲು ಸೂಚಿಸುವರು.<br>ಹೊಸ ಪದಗಳ ಅರ್ಥ ಕಲಿಯುವರು |
| | 10ನಿ | | | ಒತ್ತಕ್ಷರ ಪದಗಳ ಸಂಗ್ರಹ ಪಟ್ಟಿ | ಶಿಕ್ಷಕರು | ಹಿಂದಿನ ಚಟುವಟಿಕೆಯ ಮಕ್ಕಳ ಅಭ್ಯಾಸವನ್ನು ಪರಿಶೀಲಿಸಿ ಮಾರ್ಗದರ್ಶನ ನೀಡುವರು. |
| | 30ನಿ | | | | ಶಿಕ್ಷಕರು | ಒತ್ತಕ್ಷರಗಳ ಪದಗಳ ಸಂಗ್ರಹ ಪಟ್ಟಿಯಿಂದ ಮಕ್ಕಳಿಗೆ ಉಕ್ತಲೇಖನ ಹೇಳುವರು.<br>ಉಕ್ತಲೇಖನವನ್ನು ಪರಿಶೀಲಿಸಿ ಹಿಂದುಳಿದ ಮಕ್ಕಳನ್ನು ಗುರ್ತಿಸಿ ಸಾಮರ್ಥ್ಯದ ಪುನರ್ಬಲನಕ್ಕೆ ಅನುಕೂಲಕರವಾದ ಚಟುವಟಿಕೆಗಳನ್ನು ಮಾಡುವರು. |
| 2ನೇ ಅವಧಿ | 10ನಿ | ಗಣಿತ – ಸಂಕಲನ | ದಶಕವಿರುವಂತೆ ಎರಡಂಕಿಯ ಎರಡು ಅಥವಾ ಮೂರು ಸಂಖ್ಯೆಗಳ ಸಂಕಲನ ಮಾಡುವುದು. | ಹಾಡು, ಕಡ್ಡಿಗಳು | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–**<br>ಸಂಕಲನದ ಹಾಡು ಹಾಡುವರು.<br>ಶಿಕ್ಷಕರು ಸಂಕಲನ ಮಾಡಲು ಸೂಚನೆಯನ್ನು ನೀಡುವರು |
| | 30ನಿ | | | | ಹಿರೇಮಣಿ | ಮಕ್ಕಳಿಗೆ ಕಡ್ಡಿಗಳನ್ನು ಕೊಟ್ಟು ಕಪ್ಪು ಹಲಗೆಯ ಮೇಲೆ ಅದನ್ನು ಬರೆದು ಸಂಕಲನ ಮಾಡುವರು.<br>ಉದಾ :– 7 ಕಡ್ಡಿಗಳು, 8 ಕಡ್ಡಿಗಳು ಮೊತ್ತ 15 ಆಗುತ್ತದೆ. ಅದನ್ನು ಹತ್ತು ಬಿಡಿಗಳಾಗಿ ಬರೆಯುವರು. 1 ಹತ್ತು 5 ಬಿಡಿಗಳು. ಇದೇ ರೀತಿ ಪುನರಾವರ್ತಿಸುವರು. |
| | 10ನಿ | | | ಚಟುವಟಿಕೆ | ಶಿಕ್ಷಕರು | ಮಕ್ಕಳು ಕಲಿಕೆಗೆ ಅಣಿಯಾಗುವರು. |
| | 30ನಿ | | | | ಶಿಕ್ಷಕರು | ಶಿಕ್ಷಕರು ಪುಟ ಸಂಖ್ಯೆ 79 ಮತ್ತು 81 ರ ಚಟುವಟಿಕೆಗಳನ್ನು ಬಳಸಿ ಮಕ್ಕಳಿಗೆ ದಶಕ ಸಹಿತ ಸಂಕಲನದ ಪರಿಕಲ್ಪನೆ ಮೂಡಿಸುವರು.<br>ಮಕ್ಕಳು ಸಂಕಲನದ ಪರಿಕಲ್ಪನೆ ಅರಿಯುವರು. |

## ಐದನೇ ತರಗತಿ

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (13) | ಸಾಮರ್ಥ್ಯದ ವಿವರ (14) | ಬಳಸ ಬಹುದಾದ ಕಲಿಕಾ ಸಾಮಗ್ರಿ (15) | ನಿರ್ವಹಣೆ (16) | ಕಲಿಕಾ ಪ್ರಕ್ರಿಯೆ (17) |
|---|---|---|---|---|---|---|
| 1ನೇ ಅವಧಿ | 10ನಿ | – | – | – | – | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | – | |
| | 10ನಿ | – | – | – | – | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | – | |
| 2ನೇ ಅವಧಿ | 10ನಿ | – | – | – | – | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | – | |
| | 10ನಿ | – | – | – | – | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | – | |

## ಒಂದನೇ ತರಗತಿ

| ಅವಧಿ (1) | ಸಮಯ ಪಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (3) | ಸಾಮರ್ಥ್ಯದ ವಿವರ (4) | ಬಳಸ ಬಹುದಾದ ಕಲಿಕಾ ಸಾಮಗ್ರಿ (5) | ನಿರ್ವಹಣೆ (6) | ಕಲಿಕಾ ಪ್ರಕ್ರಿಯೆ (7) |
|---|---|---|---|---|---|---|
| 3ನೇ ಅವಧಿ | 10ನಿ | ಜೀವನ ವಿಜ್ಞಾನ | ವೈಯಕ್ತಿಕ ಸ್ವಚ್ಛತೆಯ ಬಗ್ಗೆ ಅರಿವನ್ನು ಮೂಡಿಸುವುದು. | ಮಕ್ಕಳು ಹೊಂದಿರುವ ಕೈ ಚೀಲ ನೋಟ್ ಪುಸ್ತಕ, ಪಠ್ಯ ಪುಸ್ತಕ | ಶಿಕ್ಷಕರು | ಪೂ.ಸಿ.ಚ.<br>ಕಥೆ ಹೇಳುವರು. |
| | 30ನಿ | | | | ಶಿಕ್ಷಕರು | ಪುಸ್ತಕಗಳ ಸ್ವಚ್ಛತೆಯ ಬಗ್ಗೆ ಶಿಕ್ಷಕರು ಮಕ್ಕಳಲ್ಲಿ ಅರಿವನ್ನು ಮೂಡಿಸುವರು. ಮಕ್ಕಳು ಅನುಸರಿಸುವರು.<br>ಉದಾ :– ಕೈ ಚೀಲದಲ್ಲಿರುವ ವ್ಯರ್ಥ ಕಾಗದದ ಚೂರುಗಳನ್ನು ಎಸೆಯುವರು. ನೋಟ್ ಮತ್ತು ಪಠ್ಯ ಪುಸ್ತಕಗಳಿಗೆ ಹೊದಿಕೆ ಹಾಕುವರು. |
| | 10ನಿ | ಸಾ.ಉ.ಉ.ಕಾ. | ಎಣಿಕೆ ಹಾಗು ಗುಂಪುಗಳಾಗಿ ವಿಂಗಡಿಸುವ ಕೌಶಲ್ಯ ತಿಳಿಸುವುದು | ಕಡ್ಡಿಗಳು, ದಾರ | ಶಿಕ್ಷಕರು | 6 ಇಂಚು ಉದ್ದದ ಕಡ್ಡಿಗಳನ್ನು 10 ರ ಕಟ್ಟುಗಳಾಗಿ ವಿಂಗಡಿಸಿ ದಾರದಿಂದ ಕಟ್ಟುವಂತೆ ಮಕ್ಕಳಿಗೆ ಸೂಚಿಸುವರು. |
| | 30ನಿ | | | | ಹಿರೇಮಣಿ | ಮಕ್ಕಳು 10 ರ ಕಟ್ಟುಗಳನ್ನು ಹಿರೇಮಣಿಯ ಸಹಕಾರದಿಂದ ಕಟ್ಟುವರು. |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ನಮ್ಮ ಆಹಾರ | ದೇಹದ ಮುಖ್ಯ ಭಾಗಗಳನ್ನು ಗುರ್ತಿಸುವುದು. | ಹಾಡು, ವಿವಿಧ ರೀತಿಯ ತಿಂಡಿಗಳ ಚಿತ್ರಪಟ | ಶಿಕ್ಷಕರು | ಪೂ.ಸಿ.ಚ.<br>"ಉಂಡಾಡಿ ಗುಂಡ ಅತ್ತೆ ಮನೆಗೆ ಹೋದ 10 ಲಾಡು ತಿಂದ" ಎಂಬ ಹಾಡನ್ನು ಹೇಳಿಕೊಡುವರು |
| | 30ನಿ | | | | ಹಿರೇಮಣಿ | ಶಿಕ್ಷಕರು ಹಿರೇಮಣಿಯ ಸಹಕಾರದಿಂದ ಮಕ್ಕಳಿಗೆ ಇಷ್ಟವಾದ ಆಹಾರ ವಸ್ತುಗಳನ್ನು ಪಟ್ಟಿ ಮಾಡಿಸುವರು ನಂತರ ಹೇಳಿಸುವರು.<br>ಉದಾ :– ಇಡ್ಲಿ, ಮಸಾಲೆ ದೋಸೆ, ಬಿಸಿ ಬೇಳೆ ಬಾತ್, ವಡೆ, ಜಹಂಗೀರ್, ಜಿಲೇಬಿ, ಲಾಡು, ಅನ್ನ, ಮುದ್ದೆ, ಸಾರು ಇತ್ಯಾದಿ.<br>ಮಕ್ಕಳು ತಮಗೆ ಇಷ್ಟವಾದ ಆಹಾರದ ಹೆಸರನ್ನು ಬಹಳ ಖುಷಿಯಿಂದ ತಿಳಿಸುವರು. |
| | 10ನಿ | ಸಾ.ಉ.ಉ.ಕಾ. | | | | 2 ನೇ ಅವಧಿಯಲ್ಲಿರುವ s.u.p.w. ಕಾರ್ಯ ಚಟುವಟಿಕೆ ಮುಂದುವರೆಯುತ್ತದೆ. |
| | 30ನಿ | | | | | |

## ಎರಡನೇ ತರಗತಿ

| ಅವಧಿ (1) | ಸಮಯ ಪಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (8) | ಸಾಮರ್ಥ್ಯದ ವಿವರ (9) | ಬಳಸ ಬಹುದಾದ ಕಲಿಕಾ ಸಾಮಗ್ರಿ (10) | ನಿರ್ವಹಣೆ (11) | ಕಲಿಕಾ ಪ್ರಕ್ರಿಯೆ (12) |
|---|---|---|---|---|---|---|
| 3ನೇ ಅವಧಿ | 10ನಿ | ಜೀವನ ವಿಜ್ಞಾನ | ಹೂವು ಕಾಯಿ ಹಣ್ಣಿನ ಉಪಯೋಗ ತಿಳಿಯುವರು. | | ಶಿಕ್ಷಕರು | ಪೂ.ಸಿ.ಚ.<br>ಕಥೆ ಹೇಳುವರು. |
| | 30ನಿ | | | | ಶಿಕ್ಷಕರು | ಒಂದನೆ ತರಗತಿ ಮಕ್ಕಳ ಜೊತೆ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 10ನಿ | ಕನ್ನಡ – ಲಚ್ಚಿಯ ಮೆಚ್ಚಿನ ದೋಣಿ | ಸಂಯುಕ್ತಾಕ್ಷರ ಪದಗಳು ಮತ್ತು ವಾಕ್ಯಗಳನ್ನು ಗುರ್ತಿಸಿ ಉಚ್ಚರಿಸುವುದು ಮತ್ತು ನಕಲು ಮಾಡುವುದು. | ಕಪ್ಪು ಹಲಗೆ, ಅಭ್ಯಾಸ ಪುಸ್ತಕ | ಶಿಕ್ಷಕರು | ಶಿಕ್ಷಕರು ಕಪ್ಪು ಹಲಗೆಯಲ್ಲಿ ಸಂಯುಕ್ತಾಕ್ಷರಗಳನ್ನೊಳಗೊಂಡ ವಾಕ್ಯ ಬರೆದು ಅವುಗಳನ್ನು ಓದಲು ಸೂಚಿಸುವರು. |
| | 30ನಿ | | | | ಹಿರೇಮಣಿ | ಮಕ್ಕಳು ಕಪ್ಪು ಹಲಗೆಯ ವಾಕ್ಯಗಳನ್ನು ಸ್ಪುಟವಾಗಿ ಓದುವ ಅಭ್ಯಾಸ ಮಾಡುವರು. ವಾಕ್ಯಗಳನ್ನು ತಮ್ಮ ಅಭ್ಯಾಸ ಪುಸ್ತಕದಲ್ಲಿ ಐದಾರು ಬಾರಿ ಬರೆದು ಅಭ್ಯಾಸ ಮಾಡುವರು. |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ನಮ್ಮ ಸುತ್ತಮುತ್ತ | 1. ಮನುಷ್ಯ ಮತ್ತು ಪರಿಸರದ ಪರಸ್ಪರ ಸಂಬಂಧಗಳನ್ನು ಅರಿಯುವರು. 2.ಸ್ಥಳೀಯ ಪರಿಸರಗಳ ಬಗ್ಗೆ ಮಾಹಿತಿ ಪಡೆಯುವರು. | ಸಮುದ್ರ, ಕೆರೆ, ಹಳ್ಳ, ಕೊಳ, ನದಿ ಇವುಗಳ ಚಿತ್ರಗಳು | ಶಿಕ್ಷಕರು | ಪೂ.ಸಿ.ಚ.<br>ಒಂದನೇ ತರಗತಿಯವರೊಂದಿಗೆ ಹಾಡುವರು. |
| | 30ನಿ | | | | ಶಿಕ್ಷಕರು | ಶಿಕ್ಷಕರು ಮಕ್ಕಳಿಗೆ ಕೆರೆ, ನದಿ, ಕೊಳ ಸಾಗರ ಸಮುದ್ರಗಳ ಚಿತ್ರವನ್ನು ತೋರಿಸುವರು.<br>ಮಕ್ಕಳು ವೀಕ್ಷಿಸಿದ ನಂತರ ಮಕ್ಕಳಿಂದ ಅವುಗಳ ಬಗ್ಗೆ ಮಾಹಿತಿಯನ್ನು ಪಡೆದು ಕೊಳ್ಳುವರು.<br>ಅಂದರೆ ಕೆರೆ, ನದಿ, ಸಮುದ್ರಕ್ಕೆ ಇರುವ ವ್ಯತ್ಯಾಸ ಇತ್ಯಾದಿ.<br>ನಂತರ ಅವುಗಳ ಬಗ್ಗೆ ಸಣ್ಣ ಹಾಗೂ ಸರಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು.<br>ಉದಾ :–1. ಸಮುದ್ರವನ್ನು ನೀವು ನೋಡಿರುವಿರಾ ?<br>2. ಸಮುದ್ರದ ನೀರಿನಲ್ಲಿರುವ ದೊಡ್ಡ ಪ್ರಾಣಿ ಯಾವುದು ? |
| | 10ನಿ | | | | ಶಿಕ್ಷಕರು | ಮಕ್ಕಳಿಗೆ ಶಿಕ್ಷಕರು ಚಿತ್ರಗಳನ್ನು ಬರೆಯಲು ಸೂಚನೆಯನ್ನು ನೀಡುವರು. |
| | 30ನಿ | | | | | ಮಕ್ಕಳು ನೋಡಿರುವ ಝರಿ, ಕೆರೆ, ನದಿ ಇವುಗಳ ಚಿತ್ರವನ್ನು ಬರೆಯಲು ತಿಳಿಸುವರು.<br>ಮಕ್ಕಳು ಚಿತ್ರಗಳನ್ನು ಬರೆಯುವರು. |

## ಐದನೇ ತರಗತಿ

| ಅವಧಿ (1) | ಸಮಯ ಪಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (13) | ಸಾಮರ್ಥ್ಯದ ವಿವರ (14) | ಬಳಸ ಬಹುದಾದ ಕಲಿಕಾ ಸಾಮಗ್ರಿ (15) | ನಿರ್ವಹಣೆ (16) | ಕಲಿಕಾ ಪ್ರಕ್ರಿಯೆ (17) |
|---|---|---|---|---|---|---|
| 3ನೇ ಅವಧಿ | 10ನಿ | ಭಾಷೆ – ಮಲೆನಾಡ ಸಿರಿ : ಜಲಪಾತ | ಅಪರಿಚಿತ ಸನ್ನಿವೇಶಗಳಲ್ಲಿನ ಸಂಭಾಷಣೆ, ಸಂವಾದ, ಚರ್ಚೆಗಳ ಮೂಲಕ ಅರ್ಥ ಮಾಡಿಕೊಳ್ಳುವುದು. ಸನ್ನಿವೇಶ ಮತ್ತು ಘಟನೆಗಳನ್ನು ವಿವರಿಸುವುದು. ಲೇಖನ ಚಿಹ್ನೆಗಳನ್ನು ವಾಕ್ಯಗಳಲ್ಲಿ ಬಳಸುವುದು. | | ಶಿಕ್ಷಕರು | ಪೂ.ಸಿ.ಚ.<br>1 ಮತ್ತು 2 ನೇ ತರಗತಿಯವರೊಂದಿಗೆ ನೀತಿಕಥೆ ಕೇಳುವರು. |
| | 30ನಿ | | | | ಹಿರೇಮಣಿ | ಶೃಂಗೇರಿಯ ಬಗೆಗಿರುವ ಪ್ರತೀತಿಯ (ಇತಿಹಾಸದ) ಬಗ್ಗೆ ಮಕ್ಕಳು ಕಥೆ ಹೇಳುವರು. ಗ್ರಂಥಾಲಯದಿಂದ ನೀಡಲಾದ ಸ್ಥಳ ಪರಿಚಯದ ಪುಸ್ತಕಗಳನ್ನು ಮಕ್ಕಳು ಓದುವರು ಸ್ಥಳ ಪುರಾಣದ ಅರ್ಥ ತಿಳಿಯುವರು.<br>ಹಿರೇಮಣಿ ನೆರವು ನೀಡುವರು. |
| | 10ನಿ | | | | ಶಿಕ್ಷಕರು | ಶಿಕ್ಷಕರು ಮಕ್ಕಳ ಕಲಿಕೆಯನ್ನು ಪರಿಶೀಲಿಸುವರು. |
| | 30ನಿ | | | | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಓದಿಸಲಾದ ಪಠ್ಯ ಭಾಗವನ್ನು ಕುರಿತು ಮಕ್ಕಳಿಗೆ ವಿವರಣೆ ನೀಡುವರು. ಕರ್ನಾಟಕ ಭೂಪಟದಲ್ಲಿ ಪ್ರೇಕ್ಷಣೀಯ ಸ್ಥಳಗಳನ್ನು ಗುರ್ತಿಸುವರು. ಶಿವಮೊಗ್ಗ ಜಿಲ್ಲೆಯನ್ನು ಪರಿಚಯಿಸುವರು. ಶೃಂಗೇರಿ, ಪಶ್ಚಿಮ ಘಟ್ಟ, ನೇತ್ರಾವತಿ ನದಿ ಮುಂತಾದವುಗಳನ್ನು ಗುರ್ತಿಸುವರು ಸ್ಥಳಗಳಿಗೆ ಸಂಬಂಧಿಸಿದಂತೆ ಸಂಗ್ರಹಿಸಿದ ಚಿತ್ರಗಳನ್ನು ತೋರಿಸುವರು. |
| 4ನೇ ಅವಧಿ | 10ನಿ | ವಿಜ್ಞಾನ – ಪೃಥ್ವಿಯ ಭೂ ಸ್ವರೂಪಗಳು | ಪೃಥ್ವಿಯ ವಿವಿಧ ಭೂ ಸ್ವರೂಪಗಳ ಬಗ್ಗೆ ಅರಿಯುವುದು. | ಚಟುವಟಿಕೆ | ಶಿಕ್ಷಕರು | ಶಿಕ್ಷಕರು ಸೂಚನೆಗಳನ್ನು ನೀಡುವರು. |
| | 30ನಿ | | | | ಹಿರೇಮಣಿ | ಶಿಕ್ಷಕರು ಮಕ್ಕಳನ್ನು ಗುಂಪುಗಳಲ್ಲಿ ಕುಳ್ಳಿರಿಸಿ ಪರ್ವತಗಳು, ಬೆಟ್ಟಗಳು, ಕಣಿವೆಗಳ ಲಕ್ಷಣಗಳ ಬಗ್ಗೆ ಪಟ್ಟಿ ಮಾಡಲು ತಿಳಿಸುವರು.<br>ಮಕ್ಕಳು ಗುಂಪುಗಳಲ್ಲಿ ಕುಳಿತು ಹಿರೇಮಣಿಯ ಸಹಾಯದಿಂದ ಇವುಗಳ ಲಕ್ಷಣಗಳನ್ನು ಪಟ್ಟಿ ಮಾಡುವರು. |
| | 10ನಿ | ಸಮಾಜ – ಪೌರನೀತಿಯ ಪ್ರಾಮುಖ್ಯತೆ | ಉತ್ತಮ ಪೌರನ ಲಕ್ಷಣಗಳನ್ನು ಅರಿತು ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವುದು | ದೇಶಭಕ್ತರ ಚಿತ್ರಗಳು | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಮಕ್ಕಳು ಆಲಿಸಿದ ಗೀತೆಗಳ ಪ್ರಾಮುಖ್ಯತೆಯ ಬಗ್ಗೆ ತಿಳಿಸುವರು. |
| | 30ನಿ | | | | ಶಿಕ್ಷಕರು | "ಪೌರ" ಎಂಬ ಪದದ ಅರ್ಥ ತಿಳಿಸುವರು. ಸಾಕಷ್ಟು ನಿದರ್ಶನಗಳನ್ನು ನೀಡುವರು.<br>"ಪೌರ ಜೀವನ"ದ ಅರ್ಥ ಮತ್ತು ಅಗತ್ಯಗಳನ್ನು ತಿಳಿಸುವರು.<br>ಹಕ್ಕು ಮತ್ತು ಕರ್ತವ್ಯಗಳ ಅರ್ಥ ತಿಳಿಸುವರು. |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಕಲಿಕಾ ಫಲ | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಕಲಿಕಾ ಫಲ | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಕಲಿಕಾ ಫಲ | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 1ನೇ ಅವಧಿ | 10ನಿ | ಕನ್ನಡ – ಜಡ ಓದು ಅಕ್ಷರ ಕಲಿ ಹಂತ 2, 3, 4 | ವರ್ಣಮಾಲೆಯ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರ್ತಿಸುವರು, ಓದುವರು, ಬರೆಯುವರು. | ಅಕ್ಷರಗಳ ಮಿಂಚುಪಟ್ಟಿ | ಶಿಕ್ಷಕರು | ಪೂ.ಸಿ.ಚ.<br>"ಮಾವಿನ ಓಟೆ ಪುಟ್ಟನ ಆಸೆ" ಎಂಬ ಅಭಿನಯ ಗೀತೆಯನ್ನು ಹಾಡಿಸುವರು.<br>ಶಿಕ್ಷಕರು ಮಕ್ಕಳಿಗೆ ಪದಗಳ ಮಿಂಚುಪಟ್ಟಿಗಳನ್ನು ಕೊಟ್ಟು ಅವುಗಳನ್ನು ಗುರ್ತಿಸಲು ಹೇಳುವರು. | ಭಾಷೆ – ಲಟ್ಟಿಯ ಮುಟ್ಟಿ ಜೋಡಿ | ಸಂಯುಕ್ತಾಕ್ಷರ ಪದಗಳು ಮತ್ತು ವಾಕ್ಯಗಳನ್ನು ಗುರ್ತಿಸಿ ಉಚ್ಚರಿಸುವರು ಮತ್ತು ನಕಲು ಮಾಡುವರು. | ಭಾಷಾಭ್ಯಾಸ ಚಟುವಟಿಕೆ | ಶಿಕ್ಷಕರು | ಪೂ.ಸಿ.ಚ.<br>1 ನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | । | । | । | । | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | ಹಿರೇಮಣಿ | ಮಕ್ಕಳು ಹಿರೇಮಣಿ ಸಹಾಯದಿಂದ ಮಿಂಚುಪಟ್ಟಿಯಲ್ಲಿನ ಅಕ್ಷರಗಳನ್ನು ಗುರ್ತಿಸಿ ಪದಗಳನ್ನು ಓದುವರು ಮತ್ತು ಬರೆಯುವರು. | | | | ಶಿಕ್ಷಕರು | ಪಠ್ಯ ಪುಸ್ತಕದಲ್ಲಿರುವ ಭಾಷಾಭ್ಯಾಸ ಚಟುವಟಿಕೆಗಳನ್ನು ಮಕ್ಕಳಿಂದ ಮಾಡಿಸುವರು. ವಾಕ್ಯಗಳನ್ನು ಓದಿಸುವುದು, ಜೋಡಿ ಪದಗಳನ್ನು ರಚಿಸುವುದು ಮುಂತಾದ ಚಟುವಟಿಕೆಗಳನ್ನು ಮಾಡಿಸುವರು. | | | | । | |
| | 10ನಿ | | | ಅಕ್ಷರಗಳ ಮಿಂಚುಪಟ್ಟಿಗಳು | ಶಿಕ್ಷಕರು | ಶಿಕ್ಷಕರು ಮೇಲಿನ ಚಟುವಟಿಕೆ ಪರಿಶೀಲಿಸುವರು. | | | ಬರವಣಿಗೆ | ಶಿಕ್ಷಕರು | ಶಿಕ್ಷಕರು ಮಕ್ಕಳಿಗೆ ಸೂಚನೆಯನ್ನು ನೀಡುವರು | । | । | । | । | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | ಶಿಕ್ಷಕರು | ಹಂತ –2 ರಲ್ಲಿನ ಮೂರು ಅಕ್ಷರಗಳನ್ನು ಪರಿಚಯಿಸುವರು. ಜ.ವ.ಮ. ಈ ಅಕ್ಷರಗಳನ್ನು ಬರೆಯುವ ಕ್ರಮ ಮತ್ತು ಓದುವ ಕ್ರಮ ತಿಳಿಸುವರು.<br>ಮಕ್ಕಳಿಂದ ಅಕ್ಷರಗಳನ್ನು ತಿದ್ದಿಸುವರು.<br>ಜ ವ ಮ | | | | ಹಿರೇಮಣಿ | ಪಠ್ಯ ಪುಸ್ತಕದಲ್ಲಿರುವ ಮಾದರಿ ವಾಕ್ಯಗಳನ್ನು ಕೊಟ್ಟಿರುವ ಗೆರೆಗಳಲ್ಲಿ ಅಂದವಾಗಿ ನಕಲು ಮಾಡುವರು. (ಭಾಷಾಭ್ಯಾಸ ಚಟುವಟಿಕೆ) | | | | । | |
| 2ನೇ ಅವಧಿ | 10ನಿ | ಗಣಿತ – ಸಂಕಲನ | ಮೊತ್ತ 9 ಕ್ಕೆ ಮೀರದಂತೆ ಚಿತ್ರ ಮತ್ತು ವಸ್ತು ಬಳಸಿ ಸಂಕಲನ ಮಾಡುವರು. | ಹಾಡು, ಐಸ್ ಕ್ರೀಂ ಕಡ್ಡಿಗಳು, ಚಿತ್ರಗಳು | ಶಿಕ್ಷಕರು | ಪೂ.ಸಿ.ಚ.<br>ಹಿಂದಿನ ಅವಧಿಯಲ್ಲಿ ಹಾಡು ಪುನರಾವರ್ತಿಸುವರು. | ಲಲಿತ ಕಲೆ | ಮಕ್ಕಳಲ್ಲಿ ಸಂಗೀತದ ಬಗ್ಗೆ ಅಭಿರುಚಿ ಮೂಡಿಸುವರು. | ಹಾಡು, ಜಾನಪದ ನೃತ್ಯ | ಶಿಕ್ಷಕರು | ಪೂ.ಸಿ.ಚ.<br>1 ನೇ ತರಗತಿಯ ಮಕ್ಕಳನ್ನು ಅನುಸರಿಸುವರು.<br>ಶಿಕ್ಷಕರು ನೃತ್ಯ ಮಾಡುವುದನ್ನು ತೋರಿಸಿಕೊಡುವರು. | । | । | । | । | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | ಹಿರೇಮಣಿ | ಶಿಕ್ಷಕರು ಐಸ್‌ಕ್ರೀಂ ಕಡ್ಡಿಗಳನ್ನು ಬಳಸಿ ಸಂಕಲನ ಮಾಡುವ ಬಗ್ಗೆ ಮಕ್ಕಳಿಗೆ ಸೂಚನೆಗಳನ್ನು ನೀಡುವರು.<br>* ಶಿಕ್ಷಕರು ಮಕ್ಕಳನ್ನು ಗುಂಪುಗಳಲ್ಲಿ ಕುಳಿತುಕೊಳ್ಳಲು ಹೇಳಿ ಐಸ್ ಕ್ರಿಂ ಕಡ್ಡಿಗಳನ್ನು ನೀಡಿ ಸಂಕಲನ ಮಾಡಲು ಸೂಚಿಸುವರು.<br>* ವಸ್ತು ಚಿತ್ರಗಳನ್ನು ನೀಡಿ ಸಂಕಲನ ಮಾಡಲು ಸೂಚಿಸುವರು. | | | | ಶಿಕ್ಷಕರು | "ಅಂಬಕ ಜಂಬಕ ಜಂಭದಿಂದ ಬರ್‍ತಾಳೆ" ಎಂಬ ಜಾನಪದ ಗೀತೆಯನ್ನು ಅಭ್ಯಾಸ ಮಾಡಿಸುವರು. | | | | । | |
| | 10ನಿ | | | ಚಿತ್ರಗಳು | ಶಿಕ್ಷಕರು | ಶಿಕ್ಷಕರು ಸಂಕಲನ ಮಾಡಲು ಸೂಚನೆ ನೀಡುವರು. | ಗಣಿತ – ಸಂಕಲನ | ದಶಕವಿಲ್ಲದಂತೆ ಎರಡಂಕಿಯ ಎರಡು ಅಥವಾ ಮೂರು ಸಂಖ್ಯೆಗಳ ಸಂಕಲನ ಮಾಡುವರು. | ಬಿಡಿ ಮತ್ತು ಹತ್ತರ ಕಟ್ಟುಗಳು | ಶಿಕ್ಷಕರು | ಶಿಕ್ಷಕರು ಸೂಚನೆಯನ್ನು ನೀಡುವರು | । | । | । | । | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | ಶಿಕ್ಷಕರು | ಶಿಕ್ಷಕರು ಅಭ್ಯಾಸ ಪುಸ್ತಕದ ಪುಟ ಸಂಖ್ಯೆ 56 ಮತ್ತು 57 ರ ಚಿತ್ರಗಳನ್ನು ಬಳಸಿ ಸಂಕಲನ ಮಾಡಿಸುವರು. | | | | ಹಿರೇಮಣಿ | ಶಿಕ್ಷಕರು ಮಕ್ಕಳನ್ನು ಗುಂಪುಗಳಲ್ಲಿ ಕೂರಿಸಿ ಹತ್ತರ ಮತ್ತು ಬಿಡಿ ಪಟ್ಟಿಗಳನ್ನು ಬಳಸಿ ಸರಳ ಲೆಕ್ಕಗಳನ್ನು ಮಾಡಲು ಸೂಚಿಸುವರು.<br>ಉದಾ :– ಹ ಬಿ<br>7<br>+ 4<br>1 1 | | | | । | |

**ಒಂದನೇ ತರಗತಿ**

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (3) | ಸಾಮರ್ಥ್ಯದ ವಿವರ (4) | ಬಳಸ ಬಹುದಾದ ಕಲಿಕಾ ಸಾಮಗ್ರಿ (5) | ನಿರ್ವಹಣೆ (6) | ಕಲಿಕಾ ಪ್ರಕ್ರಿಯೆ (7) |
|---|---|---|---|---|---|---|
| 3ನೇ ಅವಧಿ | 10ನಿ | ಜೀವನ ವಿಜ್ಞಾನ | ವೈಯಕ್ತಿಕ ಸ್ವಚ್ಛತೆಯ ಬಗ್ಗೆ ಅರಿವನ್ನು ಮೂಡಿಸುವುದು. | ಕೈ ಚೀಲದಲ್ಲಿರುವ ಪುಸ್ತಕಗಳು ಕಡ್ಡಿಗಳು ಮತ್ತು ದಾರ | ಶಿಕ್ಷಕರು | ಪೂ.ಸಿ.ಚ.<br>ಸ್ವಚ್ಛತೆಯ ಹಾಡು ಹೇಳುವರು.<br>ಪಠ್ಯ ಪುಸ್ತಕ ಕೈ ಚೀಲ, ನೋಟ್ ಪುಸ್ತಕ ಇವುಗಳ ಸ್ವಚ್ಛತೆಯ ಬಗ್ಗೆ ಪುಸ್ತಕಗಳು ಹಾಳಾಗದಂತೆ, ಕೈ ಚೀಲ ಕೊಳೆಯಾಗದಿರುವಂತೆ, ಸ್ವಚ್ಛತೆಯ ಬಗ್ಗೆ ಮಾರ್ಗದರ್ಶನ ನೀಡುವರು. |
| | 30ನಿ | | | | ಹಿರೇಮಣಿ | ಹಿರೇಮಣಿಯ ಮಾರ್ಗದರ್ಶನದಂತೆ ತಮ್ಮ ಪುಸ್ತಕಗಳನ್ನು ಜೋಡಿಸಿಕೊಳ್ಳುವರು, ವೈಯಕ್ತಿಕ ಸ್ವಚ್ಛತೆಯನ್ನು ಪಾಲಿಸುವರು. |
| | 10ನಿ | ಲಲಿತ ಕಲೆ | ವಿವಿಧ ರೀತಿಯ ಬಣ್ಣಗಳ ಅರಿವನ್ನು ಮೂಡಿಸುವುದು ಬಣ್ಣ ಹಚ್ಚುವ ಸಾಮರ್ಥ್ಯ ಬೆಳೆಸುವುದು. | ವಿವಿಧ ರೀತಿಯ ಸಸ್ಯಗಳ ಬಣ್ಣದ ಚಿತ್ರಗಳು | ಶಿಕ್ಷಕರು | ಸಸ್ಯದ ಚಿತ್ರಕ್ಕೆ ಬಣ್ಣವನ್ನು ತುಂಬಲು ಶಿಕ್ಷಕರು ಸೂಚಿಸುವರು. ಮಕ್ಕಳು ಅನುಸರಿಸುವರು. |
| | 30ನಿ | | | | ಹಿರೇಮಣಿ | ಮಕ್ಕಳು ಚಿತ್ರಕ್ಕೆ ಬಣ್ಣ ಹಚ್ಚುವರು. |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ನಮ್ಮ ಆಹಾರ | ಆಹಾರದ ಅವಶ್ಯಕತೆ ಬಗ್ಗೆ ಗ್ರಹಿಸುವರು. | ಹಾಡು | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–**<br>'ಬಾರೇ ಮಣಿ ಕೊರಳತಣಿ ಮಾಲೆ ಮಾಡುವ" ಎಂಬ ಹಾಡನ್ನು ಹೇಳಿಕೊಡುವರು.<br>ಹಿಂದಿನ ಅವಧಿಯಲ್ಲಿ ಶಿಕ್ಷಕರು ನಮಗೆ ಹಾಗೂ ಪ್ರಾಣಿಗಳಿಗೆ ಅಹಾರದ ಅವಶ್ಯಕತೆ ಇದೆ ಎಂಬುದನ್ನು ತಿಳಿಸಿದ್ದರು. |
| | 30ನಿ | | | | ಶಿಕ್ಷಕರು | ಇಂದು ನಮಗೆ ಆಹಾರ ಏಕೆ ಬೇಕು ? ಎಂಬುದನ್ನು ಹಲವಾರು ಸೂಕ್ತ ನಿದರ್ಶನಗಳ ಮೂಲಕ ತಿಳಿಸುವರು.<br>ಉದಾ ;– ಬದುಕಲು ಆಹಾರ ಬೇಕು, ಬೆಳವಣಿಗೆಗೆ ಆಹಾರ ಬೇಕು, ಕೆಲಸ ಮಾಡಲು ಆಹಾರ ಬೇಕು ಎಂಬುದನ್ನು ಸ್ಪಷ್ಟ ಪಡಿಸುವರು. |
| | 10ನಿ | | | ಪ್ರಶ್ನೆಗಳ ಕಾರ್ಡ್ | ಶಿಕ್ಷಕರು | ಮಕ್ಕಳಿಗೆ ಪ್ರಶ್ನೆಗಳಿಗೆ ಉತ್ತರ ನೀಡಲು ಸೂಚನೆಯನ್ನು ನೀಡುವರು. |
| | 30ನಿ | | | | ಹಿರೇಮಣಿ | ಹಿರೇಮಣಿಯ ಸಹಾಯದಿಂದ ಪಠ್ಯ ಪುಸ್ತಕದ ಪುಟ ಸಂಖ್ಯೆ 29 ರಲ್ಲಿ ಇರುವ ಚಿತ್ರಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಲು ತಿಳಿಸುವರು.<br>ಉದಾ :–1. ಹಸು ಏನು ಮಾಡುತ್ತಿದೆ ?<br>ಹಸು ಹುಲ್ಲನ್ನು ತಿನ್ನುತ್ತಿದೆ.<br>2. ಕರು ಏನು ಮಾಡುತ್ತಿದೆ ?<br>ಕರು ಹಾಲನ್ನು ಕುಡಿಯುತ್ತಿದೆ.<br>3. ಹಾಲಿನಿಂದ ಏನೇನು ಉತ್ಪತ್ತಿ ಮಾಡಬಹುದು ?<br>ಹೀಗೆ ಹಲವಾರು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು. |

**ಎರಡನೇ ತರಗತಿ**

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (8) | ಸಾಮರ್ಥ್ಯದ ವಿವರ (9) | ಬಳಸ ಬಹುದಾದ ಕಲಿಕಾ ಸಾಮಗ್ರಿ (10) | ನಿರ್ವಹಣೆ (11) | ಕಲಿಕಾ ಪ್ರಕ್ರಿಯೆ (12) |
|---|---|---|---|---|---|---|
| 3ನೇ ಅವಧಿ | 10ನಿ | ಜೀವನ ವಿಜ್ಞಾನ | | | ಶಿಕ್ಷಕರು | ಒಂದನೇ ತರಗತಿ ಮಕ್ಕಳ ಜೊತೆಯಲ್ಲಿ 2 ನೇ ತರಗತಿ ಮಕ್ಕಳು ಭಾಗವಹಿಸುವರು. |
| | 30ನಿ | | | | ಹಿರೇಮಣಿ | |
| | 10ನಿ | ಲಲಿತ ಕಲೆ | | ಪಠ್ಯ ಪುಸ್ತಕ | ಶಿಕ್ಷಕರು | |
| | 30ನಿ | | | | ಹಿರೇಮಣಿ | ಒಂದನೇ ತರಗತಿಯವರೊಂದಿಗೆ ಪಾಲ್ಗೊಳ್ಳುವರು. |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ನಮ್ಮ ಸುತ್ತಮುತ್ತ | 1. ಮನುಷ್ಯ ಮತ್ತು ಪರಿಸರದ ಪರಸ್ಪರ ಸಂಬಂಧಗಳನ್ನು ಅರಿಯುವರು.<br>2. ಸ್ಥಳೀಯ ಪರಿಸರಗಳ ಬಗ್ಗೆ ಮಾಹಿತಿ ಪಡೆಯುವರು. | ಮೂಕಾಭಿನಯ ಹಾಗೂ ಸಂಗ್ರಹಿಸಿದ ಚಿತ್ರಗಳು | ಶಿಕ್ಷಕರು | 1 ನೇ ತರಗತಿಯ ಮಕ್ಕಳೊಂದಿಗೆ ಹಾಡನ್ನು ಹಾಡುವರು. |
| | 30ನಿ | | | | ಹಿರೇಮಣಿ | ಬಟ್ಟೆ ಒಗೆಯುವ ಹಾಗೆ ; ಹಸು ಮೈ ತೊಳೆಯುವ ರೀತಿ, ಸ್ನಾನ ಮಾಡುತ್ತಿರುವಂತೆ ಮಕ್ಕಳಿಂದ ಮೂಕಾಭಿನಯ ಮಾಡಿಸಲು ಹಿರೇಮಣಿಗೆ ಹಾಗೂ ಮಕ್ಕಳಿಗೆ ಸೂಚನೆಯನ್ನು ನೀಡುವರು. ಹಾಗೆಯೇ ಮೇಲೆ ಹೇಳಿರುವ ಚಿತ್ರಗಳನ್ನು ಎಲ್ಲಿಯಾದರೂ ಅಂದರೆ ವರ್ತಮಾನ ಪತ್ರಿಕೆ ಹಳೇ ಮಾಸ ಪತ್ರಿಕೆಗಳಲ್ಲಿ ಇದ್ದಲ್ಲಿ ಅದನ್ನು ಸಂಗ್ರಹಿಸುವಂತೆ ತಿಳಿಸುವರು. |
| | 10ನಿ | ಸಾ.ಉ.ಉ.ಕಾ. | ನಯವಾಗಿ ಚಿತ್ರಗಳನ್ನು ಅಂಟಿಸುವ ಮತ್ತು ವಿವಿಧ ರೀತಿಯ ಚಿತ್ರಗಳನ್ನು ಪರಿಚಯಿಸುವ ಸಾಮರ್ಥ್ಯವನ್ನು ಹೊಂದುವುದು. | ಡ್ರಾಯಿಂಗ್ ಶೀಟ್, ರಟ್ಟು, ಕತ್ತರಿಸಿರುವ ವಿವಿಧ ರೀತಿಯ ಚಿತ್ರಗಳು, ಗೋಂದು | ಶಿಕ್ಷಕರು | ಆಯತಾಕಾರವಾಗಿ ಕತ್ತರಿಸಿದ ರಟ್ಟಿನಲ್ಲಿ ಅಥವಾ ಡ್ರಾಯಿಂಗ್ ಶೀಟಿನಲ್ಲಿ ಕತ್ತರಿಸಿರುವ ವಿವಿಧ ರೀತಿಯ ಚಿತ್ರಗಳನ್ನು ಅಂಟಿಸಲು ಶಿಕ್ಷಕರು ಸೂಚಿಸುವರು. ಮಕ್ಕಳು ಅನುಸರಿಸುವರು. |
| | 30ನಿ | | | | ಹಿರೇಮಣಿ | ಮಕ್ಕಳು ಚಿತ್ರಗಳನ್ನು ಕತ್ತರಿಸಿ ಡ್ರಾಯಿಂಗ್ ಹಾಳೆಯ ಮೇಲೆ ಅಂಟಿಸುವರು. |

**ಐದನೇ ತರಗತಿ**

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (13) | ಸಾಮರ್ಥ್ಯದ ವಿವರ (14) | ಬಳಸ ಬಹುದಾದ ಕಲಿಕಾ ಸಾಮಗ್ರಿ (15) | ನಿರ್ವಹಣೆ (16) | ಕಲಿಕಾ ಪ್ರಕ್ರಿಯೆ (17) |
|---|---|---|---|---|---|---|
| 3ನೇ ಅವಧಿ | 10ನಿ | ಭಾಷೆ – ಮಲೆನಾಡ ಸಿರಿ : ಜಲಪಾತ | ಸನ್ನಿವೇಶಗಳನ್ನು, ಸಂಭಾಷಣೆಗಳ ಮೂಲಕ ಅರ್ಥ ಮಾಡಿಕೊಳ್ಳುವುದು ಲೇಖನ ಚಿಹ್ನೆಗಳನ್ನು ವಾಕ್ಯಗಳಲ್ಲಿ ಬಳಸುವುದು. | ಶೃಂಗೇರಿಯ ಚಿತ್ರಗಳು | ಶಿಕ್ಷಕರು | **ಪೂ.ಸಿ.ಚ.**<br>**"ನೋಡು ಬಾ ನೋಡು ಬಾ ನಮ್ಮೂರ"** ಧ್ವನಿ ಸುರುಳಿಯನ್ನು ಕೇಳಿಸುವರು. |
| | 30ನಿ | | | | ಶಿಕ್ಷಕರು | ಪಠ್ಯ ಭಾಗವನ್ನು ಮುಂದುವರೆಸಿ ಮಾದರಿ ವಾಚನ ಮಾಡುವರು ಮಕ್ಕಳಿಂದ ಮಾತವನ್ನು ಓದಿಸುವರು.<br>ಶಾರದಾಂಬೆ ದೇವಸ್ಥಾನ, ವಿದ್ಯಾ ಶಂಕರರ ದೇವಸ್ಥಾನ, ಹನ್ನೆರಡು ಕಂಬಗಳ ಮಂಟಪದ ಸಂಗ್ರಹಿತ ಚಿತ್ರ ತೋರಿಸುವರು. ತುಂಗಾನದಿಯ ಬಗ್ಗೆ ವಿವರಣೆ ನೀಡುವರು. |
| | 10ನಿ | ವಿಜ್ಞಾನ – ಪೃಥ್ವಿಯ ಭೂ ಸ್ವರೂಪಗಳು | ಪೃಥ್ವಿಯ ವಿವಿಧ ಭೂ ಸ್ವರೂಪಗಳ ಬಗ್ಗೆ ಅರಿಯುವುದು. | ಪ್ರಸ್ಥ ಭೂಮಿ, ಮೈದಾನ ಮತ್ತು ಮರುಭೂಮಿಗಳ ಚಿತ್ರಗಳು ಭೂಪಟ | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಕಲಿತ ವಿಷಯದ ಬಗ್ಗೆ ಪ್ರಶ್ನೆಗಳನ್ನು ಕೇಳುವರು. |
| | 30ನಿ | | | | ಶಿಕ್ಷಕರು | * ಚಿತ್ರಗಳನ್ನು ಬಳಸಿ ಪ್ರಸ್ಥಭೂಮಿಗಳು, ಮೈದಾನ ಮತ್ತು ಮರುಭೂಮಿಗಳ ಲಕ್ಷಣಗಳ ಬಗ್ಗೆ ಚರ್ಚಿಸುವರು.<br>* ಅವುಗಳು ಉಂಟಾಗಲು ಕಾರಣಗಳನ್ನು ವಿವರಿಸುವರು.<br>* ಓಯಸಿಸ್ ಚಿತ್ರ ತೋರಿಸಿ ಅಲ್ಲಿನ ಲಕ್ಷಣಗಳ ಬಗ್ಗೆ ಚರ್ಚಿಸಿ ವಿವರಣೆ ನೀಡುವರು.<br>* ಭೂಪಟದಲ್ಲಿ ಮರುಭೂಮಿ, ಪ್ರಸ್ಥಭೂಮಿ, ಮೈದಾನ, ಬೆಟ್ಟ ಮತ್ತು ಪರ್ವತಗಳನ್ನು ಗುರ್ತಿಸುವರು. |
| 4ನೇ ಅವಧಿ | 10ನಿ | ಜೀವನ ವಿಜ್ಞಾನ | ಆಟಗಳ ಮೂಲಕ ಸಾಮಾಜಿಕ ಮತ್ತು ದೈಹಿಕ ಬೆಳವಣಿಗೆಯನ್ನು ಸಾಧಿಸುವುದೆ. | "ಟೋಪಿ ಆಟ" | ಶಿಕ್ಷಕರು | ಮಕ್ಕಳಿಗೆ ಟೋಪಿ ಆಟ ಆಡಲು ಸೂಚನೆಗಳನ್ನು ನೀಡುವರು. |
| | 30ನಿ | | | | ಹಿರೇಮಣಿ | ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಲು ಹೇಳಿ ನಂತರ ಟೋಪಿ ಆಟವನ್ನು ಆಡಲು ಹೇಳುವರು.<br>ಹಿರೇಮಣಿಯ ನೇತೃತ್ವದಲ್ಲಿ ಟೋಪಿ ಆಟವನ್ನು ಆಡುವರು. |
| | 10ನಿ | ಸಮಾಜ<br>ಪೌರನೀತಿಯ ಪ್ರಾಮುಖ್ಯತೆ | ಉತ್ತಮ ಪೌರನ ಲಕ್ಷಣಗಳನ್ನು ಅರಿತು ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವುದು. | ಸಂವಿಧಾನದ ಪುಸ್ತಕ, ಹಕ್ಕುಗಳ ಪಟ್ಟಿ | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಬೋಧಿಸಲಾದ ವಿಷಯಗಳ ಬಗ್ಗೆ ಪ್ರಶ್ನಿಸುವರು, ಉತ್ತರ ಪಡೆಯುವರು. |
| | 30ನಿ | | | | ಶಿಕ್ಷಕರು | 'ಪೌರ' ಮತ್ತು 'ಉತ್ತಮ ಪೌರ' ನ ಲಕ್ಷಣಗಳನ್ನು ತಿಳಿಸುವರು.<br>ಪ್ರತಿಯೊಬ್ಬ ಪೌರನು ಹೊಂದಿರುವ ಹಕ್ಕುಗಳನ್ನು ಕಪ್ಪು ಹಲಗೆಯಲ್ಲಿ ಪಟ್ಟಿ ಮಾಡಿ ವಿವರಿಸುವರು. |

### ಒಂದನೇ ತರಗತಿ

| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1ನೇ ಅವಧಿ | 10ನಿ | ಭಾಷೆ : ಪದ ಓದು ಅಕ್ಷರ ಕಲಿ – ಹಂತ 2, 3, 4 | ವರ್ಣಮಾಲೆಯ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರ್ತಿಸುವುದು, ಓದುವುದು ಬರೆಯುವುದು. | ಅಕ್ಷರಗಳ ಮಿಂಚುಪಟ್ಟಿ | ಶಿಕ್ಷಕರು | ಪೂ.ಸಿ.ಚ.<br>"ಎತ್ತಿನ ಕೊರಳಲಿ ಗಣ ಗಣ ಗಂಟೆ" ಎಂಬ ಅಭಿನಯ ಗೀತೆಯನ್ನು ಹಾಡಿಸುವರು. |
| | 30ನಿ | | | | ಶಿಕ್ಷಕರು<br>ಶಿಕ್ಷಕರು | ಶಿಕ್ಷಕರು ಹಿಂದಿನ ಅವಧಿಯಲ್ಲಿ ಕಲಿಸಿದ ಜ, ವ, ಮ ಅಕ್ಷರಗಳನ್ನು ಪುನರಾವರ್ತಿಸಿ ಕಲಿಸುವರು.<br>ಮಕ್ಕಳನ್ನು ವೈಯಕ್ತಿಕವಾಗಿ ಕರೆದು ಕಪ್ಪು ಹಲಗೆಯ ಮೇಲೆ ಈ ಅಕ್ಷರಗಳ ಉಕ್ತಲೇಖನ ಬರೆಸುವರು. |
| | 10ನಿ | | | ಅಕ್ಷರಗಳ ಮಿಂಚುಪಟ್ಟಿ | ಶಿಕ್ಷಕರು | ಶಿಕ್ಷಕರು ಅಕ್ಷರಗಳನ್ನು ಗುರ್ತಿಸುವ ಚಟುವಟಿಕೆಗೆ ಮಾರ್ಗದರ್ಶನ ನೀಡುವರು. |
| | 30ನಿ | | | | ಹಿರೇಮಣಿ | ಕಲಿತ ಜ, ವ, ಮ, ಅಕ್ಷರಗಳನ್ನು ಹಿಂದಿನ ಅವಧಿಯಲ್ಲಿ ಕಲಿತ ರ, ಗ, ಸ, ದ, ಅ ಅಕ್ಷರಗಳೊಂದಿಗೆ ಸೇರಿಸಿ ಎಲ್ಲಾ ಅಕ್ಷರಗಳನ್ನು ಗುರ್ತಿಸಿ ಓದಿ ಬರೆಯುವರು.<br>ಹಿರೇಮಣಿ ಮಕ್ಕಳಿಗೆ ನೆರವು ನೀಡುವನು. |
| 2ನೇ ಅವಧಿ | 10ನಿ | ಗಣಿತ – ಸಂಕಲನ | ಮೊತ್ತ 9 ಕ್ಕೆ ಮೀರದಂತೆ ಚಿತ್ರ ಮತ್ತು ವಸ್ತು ಬಳಸಿ ಸಂಕಲನ ಮಾಡುವರು. | ಅಂಕಿಗಳ ಮಿಂಚುಪಟ್ಟಿ | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–**<br>"ಒಂದು ಒಂದು ಎರಡು / ಒಳ್ಳೆಯ ಸುದ್ದಿ ಹರಡು" ಈ ಹಾಡು ಹೇಳಿಕೊಡುವರು. |
| | 30ನಿ | | | | ಶಿಕ್ಷಕರು | ಮಕ್ಕಳನ್ನು ವೃತ್ತಾಕಾರವಾಗಿ ಕೂಡಿಸಿ ಪ್ರತಿಯೊಬ್ಬರಿಗೂ ಅಂಕಿಗಳ ಮಿಂಚುಪಟ್ಟಿಗಳನ್ನು ನೀಡಿ ಅದಕ್ಕನುಗುಣವಾದ ವಸ್ತುಗಳನ್ನು ಹೊಂದಿಸಿ ಸಂಕಲನ ಮಾಡುವ ಕ್ರಮ ತಿಳಿಸುವರು.<br>ಉದಾ :– 4 3 7 |
| | 10ನಿ | ಲಲಿತ ಕಲೆ | ಸರಿಯಾದ ಕ್ರಮದಲ್ಲಿ ಜೋಡಿಸುವ ಸಾಮರ್ಥ್ಯವನ್ನು ಹೊಂದುವುದು. | ಕತ್ತರಿಸಿದ ಪ್ರಾಣಿಗಳ ಚಿತ್ರಗಳ ಬಿಡಿಭಾಗಗಳನ್ನು ಒಳಗೊಂಡ ಚಿತ್ರಗಳು. | ಶಿಕ್ಷಕರು | ಪ್ರಾಣಿಗಳ ಚಿತ್ರಗಳ ಕತ್ತರಿಸಿದ ವಿವಿಧ ಭಾಗಗಳನ್ನು ಸರಿಯಾಗಿ ಕೂಡಿಸಿ ಆ ಚಿತ್ರದ ಹೆಸರು ತಿಳಿಸುವಂತೆ ಶಿಕ್ಷಕರು ಸೂಚಿಸುವರು. |
| | 30ನಿ | | | | ಹಿರೇಮಣಿ | ಮಕ್ಕಳು ಹಿರೇಮಣಿಯ ನೆರವಿನಿಂದ ಚಿತ್ರಗಳನ್ನು ಜೋಡಿಸಿ ಗುರ್ತಿಸುವರು. |

### ಎರಡನೇ ತರಗತಿ

| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 8 | 9 | 10 | 11 | 12 |
| 1ನೇ ಅವಧಿ | 10ನಿ | ಭಾಷೆ – ಲಚ್ಚಿಯ ಮೆಚ್ಚಿನ ದೋಣಿ | ಸಂಯುಕ್ತಾಕ್ಷರ ಪದಗಳು ಮತ್ತು ವಾಕ್ಯಗಳನ್ನು ಗುರ್ತಿಸಿ ಉಚ್ಛರಿಸುವುದು ಮತ್ತು ನಕಲು ಮಾಡುವುದು. | ಒತ್ತಕ್ಷರಗಳ ಮಿಂಚು ಪಟ್ಟಿ | ಶಿಕ್ಷಕರು | ಪೂ.ಸಿ.ಚ.<br>1 ನೇ ತರಗತಿಯವರೊಂದಿಗೆ ಅಭಿನಯ ಗೀತೆಯಲ್ಲಿ ಪಾಲ್ಗೊಳ್ಳುವರು. |
| | 30ನಿ | | | | ಹಿರೇಮಣಿ | ಶಿಕ್ಷಕರು ಒತ್ತಕ್ಷರದ ಪದಗಳ ಮಿಂಚುಪಟ್ಟಿಗಳನ್ನು ಒದಗಿಸಿ ಅವುಗಳನ್ನು ವರ್ಗೀಕರಿಸಲು ಸೂಚಿಸುವರು.<br>ಮಕ್ಕಳು ಗುಂಪುಗಳಲ್ಲಿ ಕುಳಿತು ಸಜಾತಿ ಒತ್ತಕ್ಷರದ ಪದಗಳು ಮತ್ತು ವಿಜಾತಿ ಒತ್ತಕ್ಷರದ ಪದಗಳನ್ನು ವರ್ಗೀಕರಿಸಿ ಕಲಿಯುವರು. |
| | 10ನಿ | | | | ಶಿಕ್ಷಕರು | ಶಿಕ್ಷಕರು ಮಕ್ಕಳಿಂದ ಪಾಠವನ್ನು ಓದಿಸುವರು. ಸ್ಪಷ್ಟವಾದ ಓದಿಗೆ ಪ್ರೋತ್ಸಾಹ ನೀಡುವರು. |
| | 30ನಿ | | | | ಶಿಕ್ಷಕರು | ಮಕ್ಕಳಿಗೆ ಮೌಖಿಕವಾಗಿ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆಯುವರು.<br>0 0 + 0 0 0 0 0 |
| 2ನೇ ಅವಧಿ | 10ನಿ | ಗಣಿತ – ಸಂಕಲನ | ದಶಕವಿರುವಂತೆ ಎರಡಂಕಿಯ ಎರಡು ಅಥವಾ ಮೂರು ಸಂಖ್ಯೆಗಳ ಸಂಕಲನ ಮಾಡುವುದು. | ಹಾಡು, ಸಂಕಲನ ಪಟ್ಟಿ | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :–**<br>1 ನೇ ತರಗತಿಯವರೊಂದಿಗೆ ದನಿಗೂಡಿಸುವರು.<br>ಶಿಕ್ಷಕರು ಸರಳ ಲೆಕ್ಕಗಳನ್ನು ಮಾಡಲು ಸೂಚನೆಯನ್ನು ನೀಡುವರು |
| | 30ನಿ | | | | ಹಿರೇಮಣಿ | ಮಕ್ಕಳು ಸಂಕಲನ ಪಟ್ಟಿಯಲ್ಲಿ ಸರಳ ಲೆಕ್ಕಗಳನ್ನು ಮಾಡುವರು.<br>ಉದಾ :– ಹ ಬಿ<br>2 2<br>+ 1 4<br>3 6 |
| | 10ನಿ | | | ಚಿತ್ರಗಳು | ಶಿಕ್ಷಕರು | ಮಕ್ಕಳು ಕಲಿಕೆಗೆ ಅಣಿಯಾಗುವರು. |
| | 30ನಿ | | | | ಶಿಕ್ಷಕರು | ಅಭ್ಯಾಸ ಪುಸ್ತಕದ ಪುಟ ಸಂಖ್ಯೆ 82 ಮತ್ತು 83 ರ ಚಟುವಟಿಕೆಗಳನ್ನು ಬಳಸಿ ಸಂಕಲನದ ಪರಿಕಲ್ಪನೆಯನ್ನು ಮನದಟ್ಟು ಮಾಡಿಸುವರು.<br>ಮಕ್ಕಳು ಸಂಕಲನ ಪ್ರಕ್ರಿಯೆ ಕಲಿಯುವರು. |

### ಐದನೇ ತರಗತಿ

| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 13 | 14 | 15 | 16 | 17 |
| 1ನೇ ಅವಧಿ | 10ನಿ | – | – | – | ಶಿಕ್ಷಕರು | 1– 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | – | |
| | 10ನಿ | – | – | – | – | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | – | |
| 2ನೇ ಅವಧಿ | 10ನಿ | – | – | – | – | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | – | |
| | 10ನಿ | – | – | – | – | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | – | |

## ಒಂದನೇ ತರಗತಿ

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (3) | ಸಾಮರ್ಥ್ಯದ ವಿವರ (4) | ಬಳಸ ಬಹುದಾದ ಕಲಿಕಾ ಸಾಮಗ್ರಿ (5) | ನಿರ್ವಹಣೆ (6) | ಕಲಿಕಾ ಪ್ರಕ್ರಿಯೆ (7) |
|---|---|---|---|---|---|---|
| 3ನೇ ಅವಧಿ | 10ನಿ | ಜೀವನ ವಿಜ್ಞಾನ | ಮಗು ತನ್ನ ದಿನಚರಿಯನ್ನು ತನ್ನದೆ ಆದ ವಾಕ್ಯ ಪದಗಳಲ್ಲಿ ಹೇಳುವಂತೆ ಹಾಗು ಜ್ಞಾಪಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದುವುದು. | ದಿನಚರಿಯಲ್ಲಿ ಬಳಸಬಹುದಾದ ವಸ್ತುಗಳ ಚಿತ್ರಪಟ. | ಶಿಕ್ಷಕರು | ಪೂ.ಸಿ.ಚ.<br>ಸರಳ ಹಾಡು ಹೇಳಿಕೊಡುವರು.<br>ದಿನಚರಿಯನ್ನು ವಿವರಿಸುವಂತೆ ಮಕ್ಕಳಿಗೆ ಸೂಚಿಸುವರು. |
| | 30ನಿ | | | | ಹಿರೇಮಣಿ | ಹಿರೇಮಣಿಯ ಸಲಹೆ ಸೂಚನೆಗಳನ್ನು ಅನುಸರಿಸುವರು. |
| | 10ನಿ | ಸಾ.ಉ.ಉ.ಕಾ. | ಆಟಕ್ಕೆ ಅವಶ್ಯಕವಾದವುಗಳನ್ನು ತಯಾರಿಸುವುದು ವಸ್ತುಗಳಿಗೆ ಅನುಗುಣವಾಗಿ ಬಣ್ಣವನ್ನು ಹಚ್ಚುವ ಕೌಶಲ್ಯವನ್ನು ತಿಳಿಸುವರು. | ವಿವಿಧ ರೀತಿಯ ಆಟದ ಸಾಮಾಗ್ರಿಗಳು, ಬಣ್ಣ | ಶಿಕ್ಷಕರು | ಜೇಡಿ ಮಣ್ಣಿನಿಂದ ತಯಾರಿಸಿರುವ ವಿವಿಧ ರೀತಿಯ ವಸ್ತುಗಳಿಗೆ ಬಣ್ಣವನ್ನು ಹಚ್ಚಲು ಶಿಕ್ಷಕರು ಸೂಚಿಸುವರು. |
| | 30ನಿ | | | | ಹಿರೇಮಣಿ | ಮಕ್ಕಳ ಬಣ್ಣವನ್ನು ಹಚ್ಚುವರು.<br>ಉದಾ :– ಗೋಲಿ, ಪಾತ್ರೆಗಳು ಇತರ ಆಟದ ಸಾಮಾಗ್ರಿಗಳು ಮಕ್ಕಳು ಅನುಸರಿಸುವರು. |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ನಮ್ಮ ಆಹಾರ | ಆಹಾರದ ಅವಶ್ಯಕತೆ ಗ್ರಹಿಸುವರು. | ಹಾಡು, ಪುಟ ಸಂಖ್ಯೆ 30 ರ ಚಿತ್ರಪಟ | ಶಿಕ್ಷಕರು | ಪೂ.ಸಿ.ಚ.<br>ಹಿಂದಿನ ಅವಧಿಯಲ್ಲಿ ಹೇಳಿಕೊಟ್ಟಂತಹ ಹಾಡನ್ನು ಹಾಡಿಸುವರು. |
| | 30ನಿ | | | | ಹಿರೇಮಣಿ | ಶಿಕ್ಷಕರು ಮಕ್ಕಳಿಗೆ ಹಿರೇಮಣಿಯ ಸಹಾಯದಿಂದ ಪಠ್ಯ ಪುಸ್ತಕದ ಪುಟ ಸಂಖ್ಯೆ 30 ರಲ್ಲಿ ಇರುವ ಚಿತ್ರಗಳನ್ನು ವೀಕ್ಷಣೆ ಮಾಡಲು ಹೇಳಿ ಅವುಗಳ ಹೆಸರನ್ನು ಹೇಳಿಸುವಂತೆ ತಿಳಿಸುವರು. ಅಥವಾ ಸೂಚನೆಯನ್ನು ನೀಡುವರು.<br>ಹಿರೇಮಣಿಯೊಂದಿಗೆ ಮಕ್ಕಳು ಪಾಲ್ಗೊಳ್ಳುವರು.<br>ಉದಾ :– ನೀರು, ಬ್ರೆಡ್, ಮೊಟ್ಟೆ ಇತ್ಯಾದಿ |
| | 10ನಿ | ಸಾ.ಉ.ಉ.ಕಾ. | ಆಟಕ್ಕೆ ಅವಶ್ಯಕವಾದವುಗಳನ್ನು ತಯಾರಿಸುವುದು ವಸ್ತುಗಳಿಗೆ ಅನುಗುಣವಾಗಿ ಬಣ್ಣವನ್ನು ಹಚ್ಚುವ ಕೌಶಲ್ಯವನ್ನು ತಿಳಿಸುವರು. | ವಿವಿಧ ರೀತಿಯ ವಸ್ತುಗಳು | ಶಿಕ್ಷಕರು | |
| | 30ನಿ | | | | ಹಿರೇಮಣಿ | 3 ನೇ ಅವಧಿಯ ಚಟುವಟಿಕೆ 4 ನೆ ಅವಧಿಯಲ್ಲಿ ಮುಂದುವರೆದು ವಸ್ತುಗಳ ಹೆಸರು ಮತ್ತು ಅವುಗಳ ಉಪಯೋಗಗಳ ಬಗ್ಗೆ ಹೇಳಲು ಶಿಕ್ಷಕರು ಸೂಚಿಸುವರು. ಮಕ್ಕಳು ಅನುಸರಿಸುವರು. |

## ಎರಡನೇ ತರಗತಿ

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (8) | ಸಾಮರ್ಥ್ಯದ ವಿವರ (9) | ಬಳಸ ಬಹುದಾದ ಕಲಿಕಾ ಸಾಮಗ್ರಿ (10) | ನಿರ್ವಹಣೆ (11) | ಕಲಿಕಾ ಪ್ರಕ್ರಿಯೆ (12) |
|---|---|---|---|---|---|---|
| 3ನೇ ಅವಧಿ | 10ನಿ | ಜೀವನ ವಿಜ್ಞಾನ | ಮಗುವು ತನ್ನ ದಿನಚರಿಯನ್ನು ತನ್ನದೇ ಆದ ವಾಕ್ಯ, ಪದಗಳಲ್ಲಿ ಹೇಳುವುದು ಹಾಗೂ ಜ್ಞಾಪಿಸಿಕೊಳ್ಳುವ ಸಾಮರ್ಥ್ಯ ಹೊಂದುವುದು. | – | ಶಿಕ್ಷಕರು | ಪೂ.ಸಿ.ಚ.<br>ಹಾಡು ಹೇಳಿಕೊಡುವರು. |
| | 30ನಿ | | | | ಹಿರೇಮಣಿ | ಒಂದನೆ ತರಗತಿ ಮಕ್ಕಳ ಜೊತೆಯಲ್ಲಿ 2 ನೇ ತರಗತಿ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವರು. |
| | 10ನಿ | ಸಾ.ಉ.ಉ.ಕಾ. | – | – | ಶಿಕ್ಷಕರು | |
| | 30ನಿ | | | | ಹಿರೇಮಣಿ | ಒಂದನೆ ತರಗತಿ ಮಕ್ಕಳ ಜೊತೆಯಲ್ಲಿ 2 ನೇ ತರಗತಿ ಮಕ್ಕಳು ಭಾಗವಹಿಸುವರು. |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ನಮ್ಮ ಸುತ್ತಮುತ್ತ | 1. ಮನುಷ್ಯ ಮತ್ತು ಪರಿಸರದ ಪರಸ್ಪರ ಸಂಬಂಧಗಳನ್ನು ಅರಿಯುವರು. 2.ಸ್ಥಳೀಯ ಪರಿಸರಗಳ ಬಗ್ಗೆ ಮಾಹಿತಿ ಪಡೆಯುವರು. | ಮಕ್ಕಳು ಸಂಗ್ರಹಿಸಿದ ಚಿತ್ರಗಳು | ಶಿಕ್ಷಕರು | ಹಿಂದಿನ ಅವಧಿಯಲ್ಲಿ ಕಲಿತ ಹಾಡನ್ನು ಒಂದನೇ ತರಗತಿಯ ಮಕ್ಕಳೊಂದಿಗೆ ಹಾಡುವರು.<br>(ಶಿಕ್ಷಕರು ಮಕ್ಕಳಿಗೆ ಸೂಚನೆಯನ್ನು ನೀಡುವರು) |
| | 30ನಿ | | | | ಹಿರೇಮಣಿ | ಮಕ್ಕಳು ಸಂಗ್ರಹಿಸಿರುವ ಚಿತ್ರಗಳನ್ನು ಅಭ್ಯಾಸ ಪುಸ್ತಕದಲ್ಲಿ ಅಂಟಿಸಲು ಹೇಳುವರು.<br>(ಹಿರೇಮಣಿ ಸಹಾಯದಿಂದ ಪಡೆಯಲು ತಿಳಿಸುವರು.)<br>ಬೆಟ್ಟ, ಕೆರೆ, ಸಮುದ್ರ, ನದಿ, ಝರಿ, ಜಲಪಾತ, ಕಾಡು ಇತ್ಯಾದಿ ಚಿತ್ರಗಳು |
| | 10ನಿ | | | ಸರಳ ಪ್ರಶ್ನಾವಳಿಗಳ ಕಾರ್ಡ್‌ಗಳು | ಶಿಕ್ಷಕರು | ಶಿಕ್ಷಕರು ನಮ್ಮ ಸುತ್ತಮುತ್ತ ಪಾಠದ ಬಗ್ಗೆ ಸರಳ ಪ್ರಶ್ನೆಗಳ ಕಾರ್ಡ್‌ನ್ನು ತಯಾರಿಸಿಕೊಂಡು ಪ್ರಶ್ನೆಗಳನ್ನು ಕೇಳಿ ಸಮರ್ಪಕವಾದ ಉತ್ತರವನ್ನು ಪಡೆಯುವರು. |
| | 30ನಿ | | | | ಶಿಕ್ಷಕರು | 1. ನೀರನ್ನು ಸ್ವಚ್ಛವಾಗಿಡಲು ಏನು ಮಾಡಬೇಕು ?<br>2. ಕಾಡಿನಿಂದ ನಮಗೆ ಏನೇನು ದೊರೆಯುತ್ತದೆ ?<br>3. ನಿಮ್ಮ ಊರಿನಲ್ಲಿರುವ ಬೆಟ್ಟ ಗುಡ್ಡಗಳ ಹೆಸರನ್ನು ಹೇಳಿರಿ. ಇತ್ಯಾದಿ. |

## ಐದನೇ ತರಗತಿ

| ಅವಧಿ (1) | ಸಮಯ ಹಂಚಿಕೆ (2) | ವಿಷಯ ಮತ್ತು ಪಾಠದ ಹೆಸರು (13) | ಸಾಮರ್ಥ್ಯದ ವಿವರ (14) | ಬಳಸ ಬಹುದಾದ ಕಲಿಕಾ ಸಾಮಗ್ರಿ (15) | ನಿರ್ವಹಣೆ (16) | ಕಲಿಕಾ ಪ್ರಕ್ರಿಯೆ (17) |
|---|---|---|---|---|---|---|
| 3ನೇ ಅವಧಿ | 10ನಿ | ಭಾಷೆ – ಮಲೆನಾಡ ಸಿರಿ : ಜಲಪಾತ | ಸಂಭಾಷಣೆಗಳ ಮೂಲಕ ಅಪರಿಚಿತ ಸನ್ನಿವೇಶಗಳನ್ನು ಅರ್ಥ ಮಾಡಿಕೊಳ್ಳುವುದು. ಲೇಖನ ಚಿಹ್ನೆಗಳನ್ನು ವಾಕ್ಯಗಳಲ್ಲಿ ಬಳಸುವುದು. | ಹಾಡು, ಪ್ರೇಕ್ಷಣೀಯ ಸ್ಥಳಗಳ ಚಿತ್ರಗಳು | ಶಿಕ್ಷಕರು | ಪೂ.ಸಿ.ಚ.<br>"ನೋಡು ಬಾ ನೋಡು ಬಾ ನಮ್ಮೂರ" ಹಾಡನ್ನು ಮಕ್ಕಳಿಂದ ಹಾಡಿಸುವರು. |
| | 30ನಿ | | | | ಶಿಕ್ಷಕರು | ಪಠ್ಯ ಭಾಗವನ್ನು ಮುಂದುವರೆಸಿ ಮಾದರಿ ವಾಚನ ಮಾಡುವರು, ಮಕ್ಕಳಿಂದ ಓದಿಸುವರು.<br>ಬಾಬಾ ಬುಡನ್ ಗಿರಿ, ದಾದಾ ಪಹಾಡ್ ಮತ್ತು ದತ್ತಾತ್ರೇಯ ಪೀಠ ಇವುಗಳ ಚಿತ್ರ ತೋರಿಸುವರು. ವಿವರಣೆ ನೀಡುವರು.<br>ಮಲೆನಾಡಿನ ವಿಶಿಷ್ಟ ಸೌಂದರ್ಯದ ಬಗ್ಗೆ ಮಕ್ಕಳಿಗೆ ವಿವರಣೆ ನೀಡುವರು. |
| | 10ನಿ | ವಿಜ್ಞಾನ – ಪೃಥ್ವಿಯ ಭೂ ಸ್ವರೂಪಗಳು | ಪೃಥ್ವಿಯ ಭೂ ಸ್ವರೂಪಗಳು. | ಅಭ್ಯಾಸದ ಪ್ರಶ್ನೆಗಳು | ಶಿಕ್ಷಕರು | ಶಿಕ್ಷಕರು ಮಕ್ಕಳಿಗೆ ಅಭ್ಯಾಸದ ಪ್ರಶ್ನೆಗಳಿಗೆ ಉತ್ತರ ಹೇಳಿಸಿ ನೋಟ್ ಪುಸ್ತಕದಲ್ಲಿ ನಕಲು ಮಾಡಿಸುವರು. |
| | 30ನಿ | | | | ಶಿಕ್ಷಕರು | ಮಕ್ಕಳು ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳಿ, ನೋಟ್ ಪುಸ್ತಕದಲ್ಲಿ ನಕಲು ಮಾಡುವರು. |
| 4ನೇ ಅವಧಿ | 10ನಿ | ಸಮಾಜ – ಪೌರನೀತಿಯ ಪ್ರಾಮುಖ್ಯತೆ | ಉತ್ತಮ ಪೌರನ ಲಕ್ಷಣಗಳನ್ನು ಅರಿತು ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವುದು. | ಹಕ್ಕು ಮತ್ತು ಕರ್ತವ್ಯಗಳ ಪಟ್ಟಿ | ಶಿಕ್ಷಕರು | ಮಕ್ಕಳು ಕಲಿಕೆಗೆ ಅಣಿಯಾಗುವರು. |
| | 30ನಿ | | | | ಶಿಕ್ಷಕರು | ಶಿಕ್ಷಕರು ಮಕ್ಕಳ ಹಕ್ಕುಗಳ ಬಗ್ಗೆ ಚರ್ಚಿಸುವರು.<br>ಪೌರನ ಕರ್ತವ್ಯಗಳ ಬಗ್ಗೆ ವಿವರಣೆ ನೀಡುವರು. ಪ್ರಮುಖ ಕರ್ತವ್ಯಗಳನ್ನು ಕಪ್ಪು ಹಲಗೆಯಲ್ಲಿ ಪಟ್ಟಿ ಮಾಡುವರು.<br>ಮಕ್ಕಳಿಂದ ಓದಿಸಿ ಅರ್ಥ ತಿಳಿಸುವರು. ಹಕ್ಕುಮತ್ತು ಕರ್ತವ್ಯಗಳೆರಡೂ ಒಂದೇ ನಾಣ್ಯದ ಎರಡು ಮುಖಗಳೆಂಬುದನ್ನು ಮಕ್ಕಳಿಗೆ ಮನದಟ್ಟು ಮಾಡಿಸುವರು. |
| | 10ನಿ | ಜೀವನ ವಿಜ್ಞಾನ | 2 ರ ಅಪವರ್ತನಗಳನ್ನು ಸೂಚಿಸುವ ಆಟ. | ಹಾಡು, ಗುಂಪು ಚಟುವಟಿಕೆ | ಶಿಕ್ಷಕರು | ಮಕ್ಕಳನ್ನು ವೃತ್ತಾಕಾರದಲ್ಲಿ ನಿಂತುಕೊಳ್ಳಲು ಹೇಳಿ 2ರ ಅಪವರ್ತನ ಸಂಖ್ಯೆಗಳನ್ನು ಹೇಳಿಸಿ ಸಂಖ್ಯೆಗಳು ಬಂದಾಗ ಚಪ್ಪಾಳೆ ಹಾಕುವಂತೆ ಸೂಚನೆಯನ್ನು ನೀಡುವರು. |
| | 30ನಿ | | | | ಹಿರೇಮಣಿ | 2, 4, 6, 8, 10, 12, 14, 16, 18, 20 ಈ ಸಂಖ್ಯೆಗಳು ಬಂದಾಗ ಚಪ್ಪಾಳೆ ಹಾಕುವಂತೆ ಮಾದರಿಯಾಗಿ ತೋರಿಸುವರು.<br>ನಂತರ ಹಿರೇಮಣಿಯ ಸಹಾಯದಿಂದ 5 ರ ಅಪವರ್ತನಗಳನ್ನು ಸೂಚಿಸುವ ಆಟವನ್ನು ಆಡುವರು.<br>ಮಕ್ಕಳು ಸಂತಸದಿಂದ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ವಿವರ | ಬಳಸುವ ಕಲಿಕೋಪಕರಣ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ವಿವರ | ಬಳಸುವ ಕಲಿಕೋಪಕರಣ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ವಿವರ | ಬಳಸುವ ಕಲಿಕೋಪಕರಣ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 1ನೇ ಅವಧಿ | 10ನಿ | ಭಾಷೆ : ಪದ ಓದು ಅಕ್ಷರ ಕಲಿ – ಹಂತ 2, 3, 4 | ವರ್ಣಮಾಲೆಯ ಸರಳ ಅಕ್ಷರಗಳನ್ನು ಓದುವುದು ಮತ್ತು ಬರೆಯುವುದು ಗುರುತಿಸುವುದು ಓದುವುದು ಮತ್ತು ಬರೆಯುವರು. | ಮುದ್ರಿತ ಅಕ್ಷರಗಳ ಕಾರ್ಡ್‌ಗಳು | ಶಿಕ್ಷಕರು | ಪೂ.ಸಿ.ಚ.<br>"ಅಮ್ಮ ಅಮ್ಮ ಅಮ್ಮ ನನ್ನ ತೋಳಿಗೆ ರೆಕ್ಕೆ ಹಚ್ಚು" ಎಂಬ ಅಭಿನಯ ಗೀತೆಯನ್ನು ಹಾಡಿಸುವರು. | ಭಾಷೆ – ಬಟ್ಟೆಯ ಮುಟ್ಟಿ ಜೋಡಿ | ಸಂಯುಕ್ತಾಕ್ಷರಗಳ ಪದಗಳು ಮತ್ತು ವಾಕ್ಯಗಳನ್ನು ಗುರ್ತಿಸುವುದು ಮತ್ತು ಓದಲು ಮಾಡುವುದು. | ಒತ್ತಕ್ಷರದ ವಾಕ್ಯಗಳ ಮಿಂಚುಪಟ್ಟಿ | ಶಿಕ್ಷಕರು | ಪೂ.ಸಿ.ಚ.<br>1 ನೇ ತರಗತಿಯ ಮಕ್ಕಳೊಂದಿಗೆ ಅಭಿನಯ ಗೀತೆಯಲ್ಲಿ ಪಾಲ್ಗೊಳ್ಳುವರು. | – | – | – | – | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | ಹಿರೇಮಣಿ | ವೃತ್ತ ಪತ್ರಿಕೆಗಳಿಂದ ಸಂಗ್ರಹಿಸಿ ತಯಾರಿಸಿದ ದಪ್ಪ ಅಕ್ಷರಗಳ ಸರಳ ಪದಗಳ ಕಾರ್ಡ್‌ಗಳನ್ನು ಮಕ್ಕಳು ಓದುವರು. | | | | ಶಿಕ್ಷಕರು | ಶಿಕ್ಷಕರು ತಯಾರಿಸಿರುವ ಒತ್ತಕ್ಷರಗಳ ವಾಕ್ಯಗಳಿರುವ ಮಿಂಚು ಪಟ್ಟಿಗಳನ್ನು ಮಕ್ಕಳಿಗೆ ಕೊಟ್ಟು ಓದಿಸುವರು.<br>ಓದುವಿಕೆಯಲ್ಲಿನ ಲೋಪದೋಷಗಳನ್ನು ತಿದ್ದುವರು.<br>ದಿನ ಪತ್ರಿಕೆಯ ದಪ್ಪ ಅಕ್ಷರಗಳ ಸಾಲುಗಳನ್ನು ಓದಿಸುವರು. | | | | | |
| | 10ನಿ | | | ಅಕ್ಷರಗಳ ಮಿಂಚುಪಟ್ಟಿಗಳು ಅಭ್ಯಾಸ ಪುಸ್ತಕ | ಶಿಕ್ಷಕರು | ಮಕ್ಕಳ ಓದುವಿಕೆಯನ್ನು ಶಿಕ್ಷಕರು ಪರಿಶೀಲಿಸುವರು. | | | ಒತ್ತಕ್ಷರದ ವಾಕ್ಯಗಳ ಮಿಂಚುಪಟ್ಟಿ | ಶಿಕ್ಷಕರು | ಶಿಕ್ಷಕರು ಮಕ್ಕಳಿಗೆ ವಾಕ್ಯಗಳನ್ನು ಬರೆಯಲು ಮಾರ್ಗದರ್ಶನ ಮಾಡುವರು. | – | – | – | – | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | ಶಿಕ್ಷಕರು | ಹಂತ – 2 ರಲ್ಲಿ ಬ ಮತ್ತು ನ ಅಕ್ಷರಗಳನ್ನು ಪರಿಚಯಿಸುವರು ಅಕ್ಷರಗಳನ್ನು ಬರೆಯುವ ಕ್ರಮ ಓದುವ ರೀತಿಗಳನ್ನು ತಿಳಿಸಿ ಮಿಂಚುಪಟ್ಟಿಗಳಲ್ಲಿ ಪ್ರದರ್ಶಿಸುವರು. ಆ ಅಕ್ಷರಗಳಿಂದ ಸರಳ ಪದಗಳನ್ನು ರಚಿಸಿ ಮಕ್ಕಳಿಗೆ ಹೇಳಿಕೊಡುವರು.<br>ಉದಾ :– ಬರ, ನರ, ಮನ, ಬನ ಇತ್ಯಾದಿ. | | | | ಹಿರೇಮಣಿ | ಹಿಂದಿನ ಅವಧಿಯಲ್ಲಿ ನೀಡಲಾದ ಮಿಂಚುಪಟ್ಟಿಗಳಲ್ಲಿರುವ ವಾಕ್ಯಗಳನ್ನು ಮಕ್ಕಳು ಸರದಿಯಂತೆ ಕಪ್ಪು ಹಲಗೆಯಲ್ಲಿ ಬರೆಯುವರು ನಂತರ ತಮ್ಮ ಅಭ್ಯಾಸ ಪುಸ್ತಕದಲ್ಲಿ ನಕಲು ಮಾಡುವರು.<br>ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರಗಳನ್ನು ಪಡೆಯುವರು. | | | | – | |
| 2ನೇ ಅವಧಿ | 10ನಿ | ಗಣಿತ – ಸಂಕಲನ | ಮೊತ್ತ 9 ಕ್ಕೆ ಮೀರದಂತೆ ಚಿತ್ರ ಮತ್ತು ವಸ್ತು ಬಳಸಿ ಸಂಕಲನ ಮಾಡುವರು. | ಸಂಕಲನ ಕೊಳವೆ | ಶಿಕ್ಷಕರು | ಪೂ.ಸಿ.ಚ.<br>ಶಿಕ್ಷಕರು ನರಿ ಮತ್ತು ಸಿಂಹದ ಕಥೆ ಹೇಳುವರು. | ಗಣಿತ – ಸಂಕಲನ | ದಶಕವಿಲ್ಲದಂತೆ ಎರಡಂಕಿಯ ಎರಡು ಅಥವಾ ಮೂರು ಸಂಖ್ಯೆಗಳ ಸಂಕಲನ ಮಾಡುವರು. | ಹತ್ತರ ಕಟ್ಟು, ಬಿಡಿಗಳು | ಶಿಕ್ಷಕರು | ಪೂ.ಸಿ.ಚ.<br>ಶಿಕ್ಷಕರು ಹೇಳುವ ಕಥೆ ಆಲಿಸುವರು. | – | – | – | – | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | ಹಿರೇಮಣಿ | ಶಿಕ್ಷಕರು ಮಕ್ಕಳಿಗೆ ಸಂಕಲನ ಕೊಳವೆ ನೀಡಿ ಸಂಕಲನ ಮಾಡಲು ಸೂಚಿಸುವರು.<br>(ಹಿರೇಮಣಿ ಮಾರ್ಗದರ್ಶನ ನೀಡುವರು) 3 + 2 = 5  | | | | ಶಿಕ್ಷಕರು | ಅಭ್ಯಾಸ ಪುಸ್ತಕದ ಪುಟ ಸಂಖ್ಯೆ 86 ರ ಚಟುವಟಿಕೆ ಬಳಸಿ ಮೂರು ಸಂಖ್ಯೆಗಳ ಸಂಕಲನ ಮಾಡಿಸುವರು.<br>* ಪುಟ ಸಂಖ್ಯೆ 84 ರ ಲೆಕ್ಕಗಳನ್ನು ಮಾಡಲು ಸೂಚಿಸುವರು.<br>* ನಂತರ ಪರಿಶೀಲನೆ ಮಾಡುವರು. | | | | – | |
| | 10ನಿ | | | ಸಂಖ್ಯಾ ಚಿತ್ರಗಳು. | ಶಿಕ್ಷಕರು | ಶಿಕ್ಷಕರು ಸಂಕಲನ ಮಾಡಲು ಸೂಚನೆಗಳನ್ನು ನೀಡುವರು. | ಲಲಿತ ಕಲೆ | ಜಾನಪದ ನೃತ್ಯ | ಕಥೆ, ನೃತ್ಯ | ಶಿಕ್ಷಕರು | ಮಕ್ಕಳು ನೃತ್ಯಾಭ್ಯಾಸ ಮಾಡಲು ಸೂಚಿಸುವರು. | – | – | – | – | – 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. – |
| | 30ನಿ | | | | ಶಿಕ್ಷಕರು | ಸಂಖ್ಯಾ ಚಿತ್ರಗಳನ್ನು ಗುಂಪುಗಳಲ್ಲಿ ಮಕ್ಕಳಿಗೆ ನೀಡಿ ಸಂಕಲನ ಮಾಡಿಸುವರು.<br>ಉದಾ :– 2 + 2 = 4 | | | | ಹಿರೇಮಣಿ | ಹಿಂದಿನ ಅವಧಿಯಲ್ಲಿ ಕಲಿತ ಅಂಬಕ ಜುಂಬಕ ಎಂಬ ಜಾನಪದ ನೃತ್ಯವನ್ನು ಮತ್ತೆ ಅಭ್ಯಾಸ ಮಾಡುತ್ತಾ ಕಲಿಯುವರು. | | | | – | |

**ಒಂದನೇ ತರಗತಿ**

| ಅವಧಿ | ಸಮಯ ಪಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 3 | 4 | 5 | 6 | 7 |
| 3ನೇ ಅವಧಿ | 10ನಿ | ಜೀವನ ವಿಜ್ಞಾನ | ಊನ ನಿವಾರಕ ವ್ಯಾಯಾಮಗಳ ಬಗ್ಗೆ ಅರಿವು ಮೂಡಿಸುವುದು | ಸರಿಯಾದ ಮತ್ತು ತಕ್ಕ ಭಂಗಿಗಳನ್ನು ಒಳಗೊಂಡ ಆಸನಗಳ ಚಿತ್ರಪಟ | ಶಿಕ್ಷಕರು | **ಪೂ.ಸಿ.ಚ.** ಶಿಕ್ಷಕರು ಊನ ನಿವಾರಕ ವ್ಯಾಯಾಮಗಳನ್ನು ಮಾಡಿಸಲು ಸೂಚಿಸುವರು ಮಕ್ಕಳು ಅನುಸರಿಸುವರು. |
| | 30ನಿ | | | | ಶಿಕ್ಷಕರು | ಜೀವನ ವಿಜ್ಞಾನ ಪುಸ್ತಕ ಪುಟ ಸಂಖ್ಯೆ 23, 24 ರಲ್ಲಿ ಇದ್ದಂತೆ ಚಟುವಟಿಕೆ ನಿರ್ವಹಿಸುವರು. |
| | 10ನಿ | ಜೀವನ ವಿಜ್ಞಾನ | | | ಶಿಕ್ಷಕರು | ಶಿಕ್ಷಕರು ಊನ ನಿವಾರಕ ವ್ಯಾಯಾಮಗಳನ್ನು ಮಾಡಿ ತೋರಿಸುವರು. |
| | 30ನಿ | | | | ಹಿರೇಮಣಿ | ಮಕ್ಕಳು ಶಿಕ್ಷಕರು ಮಾಡಿದ ವ್ಯಾಯಾಮಗಳನ್ನು ಅನುಕರಿಸಿ ಮಾಡುವರು. ಶಿಕ್ಷಕರು ತಪ್ಪುಗಳನ್ನು ತಿದ್ದಿ ಸರಿಯಾದ ಭಂಗಿಯನ್ನು ಸೂಚಿಸುತ್ತಾ ಮಾಡಿಸುವರು. (ಹಿರೇಮಣಿಯು ಮೇಲಿನ ಚಟುವಟಿಕೆಯಲ್ಲಿ ಸಹಕರಿಸುವನು) |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ನಮ್ಮ ಆಹಾರ | ಆಹಾರದ ಅವಶ್ಯಕತೆ ಗ್ರಹಿಸುವರು. | | ಶಿಕ್ಷಕರು | **ಪೂ.ಸಿ.ಚ** 2 ನೇ ತರಗತಿಯವರಿಗೆ ಹೇಳಿಕೊಟ್ಟಂತಹ ಹಾಡು ನಾನು ನೋಡುವೆ ಕಣ್ಣಿನಿಂದಲೇ ಎಂಬ ಹಾಡನ್ನು ಹೇಳಿ ಕೊಡುವರು. |
| | 30ನಿ | | | | ಶಿಕ್ಷಕರು | ಮಕ್ಕಳು ನೋಡಿರುವ ಆಹಾರ ಪದಾರ್ಥಗಳಲ್ಲಿ ಸಸ್ಯಗಳಿಂದ ಹಾಗೂ ಪ್ರಾಣಿಗಳಿಂದ ದೊರೆಯುವ ಆಹಾರವನ್ನು ತಿಳಿಸುವರು. ನಂತರ ಪಟ್ಟಿ ಮಾಡಿ ಕಪ್ಪು ಹಲಗೆಯ ಮೇಲೆ ಬರೆಯುವರು.<br>ಸಸ್ಯಗಳಿಂದ :– ಬಾಳೆ, ದ್ರಾಕ್ಷಿ, ಸೇಬು, ಬದನೆ ಇತ್ಯಾದಿ.<br>ಪ್ರಾಣಿಗಳಿಂದ :– ಮೊಟ್ಟೆ, ಮೀನು, ಮಾಂಸ, ಹಾಲು, ಮೊಸರು, ತುಪ್ಪ ಇತ್ಯಾದಿ |
| | 10ನಿ | | | | ಶಿಕ್ಷಕರು | (ಶಿಕ್ಷಕರು ಆಹಾರ ಪದಾರ್ಥ ಗುರ್ತಿಸಲು ಮಕ್ಕಳಿಗೆ ಸೂಚನೆಯನ್ನು ನೀಡುವರು.) |
| | 30ನಿ | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಚಿತ್ರಪಟದಲ್ಲಿ ನೀಡಿರುವ ಆಹಾರಗಳಲ್ಲಿ ಮಗು ತಿನ್ನುವ ಆಹಾರವನ್ನು ಗುರುತಿಸುವಂತೆ ತಿಳಿಸುವರು. ಮಕ್ಕಳು ಪ್ರತಿಯೊಬ್ಬರು ಆಹಾರ ಪದಾರ್ಥಗಳನ್ನು ಗುರ್ತಿಸುವರು. |

**ಎರಡನೇ ತರಗತಿ**

| ಅವಧಿ | ಸಮಯ ಪಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 8 | 9 | 10 | 11 | 12 |
| 3ನೇ ಅವಧಿ | 10ನಿ | ಜೀವನ ವಿಜ್ಞಾನ | – | – | ಶಿಕ್ಷಕರು | **ಪೂ.ಸಿ.ಚ** (ಒಂದನೆ ತರಗತಿ ಮಕ್ಕಳ ಜೊತೆಯಲ್ಲಿ 2 ನೇ ತರಗತಿ ಮಕ್ಕಳು ಭಾಗವಹಿಸುವರು.) |
| | 30ನಿ | | | | ಶಿಕ್ಷಕರು | |
| | 10ನಿ | ಜೀವನ ವಿಜ್ಞಾನ | – | – | ಶಿಕ್ಷಕರು | |
| | 30ನಿ | | | | ಹಿರೇಮಣಿ | 1 ನೇ ತರಗತಿಯವರೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| 4ನೇ ಅವಧಿ | 10ನಿ | ಪರಿಸರ ಅಧ್ಯಯನ – ನಮ್ಮ ಆಹಾರ | ದೇಹದ ಅಂಗಗಳನ್ನು ಗುರುತಿಸುವರು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು. | ದೇಹದ ಅಂಗಗಳ ಚಿತ್ರಪಟ | ಶಿಕ್ಷಕರು | **ಪೂ.ಸಿ.ಚ** "ನಾನು ನೋಡುವೆ ಕಣ್ಣಿನಿಂದಲೇ ನಾನು ನೋಡುವೆ ಕಣ್ಣಿನಿಂದಲೇ ಅರೆ ಡಿಂಗಟಕ, ಡಿಂಗಟಕ ಡಿಂಗಟಕ, ಡಿಂಗ್" ಎಂಬ ಹಾಡನ್ನು ಹೇಳಿಕೊಡುವರು. |
| | 30ನಿ | | | | ಹಿರೇಮಣಿ | ಶಿಕ್ಷಕರು ಮಕ್ಕಳಿಗೆ ಕೈ, ಕಾಲು, ಕಣ್ಣು, ಕಿವಿ ಈ ಅಂಗಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಮಾಡಿಸುವರು. ನಂತರ ಈ ಮೇಲ್ಕಂಡ ಅಂಗಗಳನ್ನು ಪಟ್ಟಿ ಮಾಡಿಸುವರು. ಮಾವುದಾದರೂ ಒಂದು ಮಗುವನ್ನು ಕರೆದು ಆ ಅಂಗಗಳನ್ನು ತೋರಿಸುವಂತೆ ಹೇಳುವರು. (ಶಿಕ್ಷಕರು ಚಟುವಟಿಕೆಗಳ ಮೂಲಕ ಅಂಗಗಳ ಪರಿಚಯವನ್ನು ಬಹಳ ಸುಲಭವಾಗಿ ಮಾಡಿಸುವರು.) |
| | 10ನಿ | ಸಾ.ಉ.ಉ.ಕಾ. | – | ಮನೆಯನ್ನು ಬರೆದಿರುವ ಚಿತ್ರ, ಪೊರಕೆ ಕಡ್ಡಿಗಳು, ಗೊಂದು | ಶಿಕ್ಷಕರು | ಪೊರಕೆ ಕಡ್ಡಿಗಳನ್ನು ಬಳಸಿ ಮನೆಯ ಚಿತ್ರ ರಚಿಸುವಂತೆ ಶಿಕ್ಷಕರು ಸೂಚನೆ ನೀಡುವರು. |
| | 30ನಿ | | | | ಹಿರೇಮಣಿ | ಮಕ್ಕಳು ಮನೆಯ ಚಿತ್ರಕ್ಕೆ ಕಡ್ಡಿಗಳನ್ನು ಅಂಟಿಸುವರು. |

**ಐದನೇ ತರಗತಿ**

| ಅವಧಿ | ಸಮಯ ಪಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|
| 1 | 2 | 13 | 14 | 15 | 16 | 17 |
| 3ನೇ ಅವಧಿ | 10ನಿ | ಭಾಷೆ – ಮಲೆನಾಡ ಸಿರಿ : ಜಲಪಾತ | ಸಂಭಾಷಣೆಗಳ ಮೂಲಕ ಅಪರಿಚಿತ ಸನ್ನಿವೇಶಗಳನ್ನು ಅರ್ಥ ಮಾಡಿಕೊಳ್ಳುವುದು. ಲೇಖನ ಚಿಹ್ನೆಗಳನ್ನು ಬಳಸುವುದು. | ಧ್ವನಿ ಸುರುಳಿ, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳ ಚಿತ್ರ ಪಟಗಳು | ಶಿಕ್ಷಕರು | **ಪೂ.ಸಿ.ಚ** "ಜೇನಿನ ಮಳೆಯೋ. . . ." ಹಾಡಿನ ಧ್ವನಿ ಸುರುಳಿ ಕೇಳಿಸುವರು. |
| | 30ನಿ | | | | ಹಿರೇಮಣಿ | ಹಿಂದಿನ ಅವಧಿಗಳಲ್ಲಿ ಆಲಿಸಿ ಗ್ರಹಿಸಿದ ವಿಷಯಗಳ ಬಗ್ಗೆ ಮಕ್ಕಳು ಲಘು ಚರ್ಚೆ ಮಾಡುವರು. ಮಲೆನಾಡಿನ ವಿಶಿಷ್ಟತೆಯ ಬಗ್ಗೆ, ಶಿವಮೊಗ್ಗ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ, ದೇವಸ್ಥಾನಗಳ ಬಗ್ಗೆ ವಿಷಯಗಳನ್ನು ಮನನ ಮಾಡುವರು ಚಿತ್ರಗಳನ್ನು ವೀಕ್ಷಣೆ ಮಾಡುವರು. |
| | 10ನಿ | ಮೌಲ್ಯ ಶಿಕ್ಷಣ ಈಸೋಪನ ನೀತಿಕಥೆ | | ನೀತಿಕಥೆ | ಶಿಕ್ಷಕರು | ಮಕ್ಕಳು ಕಥೆ ಕೇಳಲು ಅಣಿಯಾಗುವರು. |
| | 30ನಿ | | | | ಶಿಕ್ಷಕರು | ಪ್ರತಿಯೊಂದು ವಸ್ತುವು ಉಪಯೋಗಕ್ಕೆ ಬರುತ್ತದೆ ಎಂಬುದನ್ನು ಈಸೋಪನ ನೀತಿಕಥೆ ಪುಸ್ತಕದಲ್ಲಿರುವ "ಉಪಯೋಗ" ಎಂಬ ಕಥೆಯನ್ನು ಹೇಳಿ ಕೊಡುವರು.<br>ಶಿಕ್ಷಕರು ಹೇಳುವ ಕಥೆಯನ್ನು ಆಲಿಸುವರು, ನೀತಿಯನ್ನು ಅರಿಯುವರು. |
| 4ನೇ ಅವಧಿ | 10ನಿ | ಸಮಾಜ – ಪೌರನೀತಿಯ ಪ್ರಾಮುಖ್ಯತೆ | ಉತ್ತಮ ಪೌರನ ಲಕ್ಷಣಗಳನ್ನು ಅರಿತು ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವುದು. | ಟಿಪ್ಪಣಿ ಪುಸ್ತಕ | ಶಿಕ್ಷಕರು | ಪಠ್ಯಕ್ಕೆ ಸಂಬಂಧಿಸಿದ ಪ್ರಶ್ನೋತ್ತರಗಳನ್ನು ಬರೆದುಕೊಳ್ಳಲು ಸೂಚನೆ ನೀಡುವರು. |
| | 30ನಿ | | | | ಹಿರೇಮಣಿ | ಹಿರೇಮಣಿಯು ಶಿಕ್ಷಕರು ನೀಡಿರುವ ಪ್ರಶ್ನೋತ್ತರಗಳ 'ಟಿಪ್ಪಣಿ ಪುಸ್ತಕ'ದಿಂದ ಕಪ್ಪು ಹಲಗೆಯ ಮೇಲೆ ಪಠ್ಯಕ್ಕೆ ಸಂಬಂಧಿಸಿದ ಪ್ರಶ್ನೋತ್ತರಗಳನ್ನು ಬರೆಯುವನು. ಇತರೆ ವಿದ್ಯಾರ್ಥಿಗಳು ನಕಲು ಮಾಡಿಕೊಳ್ಳುವರು.<br>ಮಕ್ಕಳು ಅದನ್ನು ತಮ್ಮ ಅಭ್ಯಾಸ ಪುಸ್ತಕಕ್ಕೆ ನಕಲು ಮಾಡುವರು. |
| | 10ನಿ | ವಿಜ್ಞಾನ – ವಿವಿಧ ಭೂ ಸ್ವರೂಪಗಳಲ್ಲಿ ಸಸ್ಯ ಮತ್ತು ಜನರ ಜೀವನ | ವಿವಿಧ ಭೂ ಸ್ವರೂಪಗಳಲ್ಲಿ ಕಂಡು ಬರುವ ವಿವಿಧ ಸಸ್ಯವರ್ಗದ ವಿಧಗಳನ್ನು ತಿಳಿಯುವರು. | ಭೂ ಸ್ವರೂಪಗಳ ಚಿತ್ರಗಳು. ವಿವಿಧ ಪ್ರಕಾರದ ಕಾಡುಗಳ ಚಿತ್ರಗಳು. | ಶಿಕ್ಷಕರು | ಮಕ್ಕಳು ಕಲಿಕೆಗೆ ಸಿದ್ಧರಾಗುವರು. |
| | 30ನಿ | | | | ಶಿಕ್ಷಕರು | * ವಾಯುಗುಣ, ಉಷ್ಣತೆ, ಮಳೆ ಅಥವಾ ಹಿಮವೃಷ್ಟಿಯ ಮೇಲೆ ಭೂ ಸ್ವರೂಪಗಳ ಲಕ್ಷಣಗಳು ಬೀರುವ ಪ್ರಭಾವವನ್ನು ಚಿತ್ರಗಳ ಮೂಲಕ ವಿವರಿಸುವರು.<br>* ಉಷ್ಣತೆ, ಮಳೆ ಅಥವಾ ಹಿಮವೃಷ್ಟಿ ಪ್ರತಿ ಭೂ ಸ್ವರೂಪದ ಸಸ್ಯ, ಪ್ರಾಣಿ ಮತ್ತು ಮಾನವನ ಚಟುವಟಿಕೆಗಳ ಮೇಲೆ ಬೀರುವ ಪ್ರಭಾವದ ಬಗ್ಗೆ ಚರ್ಚೆ.<br>ವಿವಿಧ ಪ್ರಕಾರದ ಕಾಡುಗಳ ಚಿತ್ರಗಳನ್ನು ತೋರಿಸಿ, ಅವುಗಳ ಲಕ್ಷಣಗಳ ಬಗ್ಗೆ ಚರ್ಚಿಸುವರು. |

| ಅವಧಿ | ಸಮಯದ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬೇಕಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬೇಕಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬೇಕಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 1ನೇ ಅವಧಿ | - | - | - | - | - | **– ಸಾಮೂಹಿಕ ಕವಾಯಿತು –** | - | - | - | - | **– ಸಾಮೂಹಿಕ ಕವಾಯತು –** | - | - | - | - | **– ಸಾಮೂಹಿಕ ಕವಾಯತು –** |
| 2ನೇ ಅವಧಿ | 10ನಿ | **ಭಾಷೆ : ಪಾಠ ಓದು ಅಕ್ಷರ ಕಲಿ – ಹಂತ 2, 3, 4** | ವರ್ಣಮಾಲೆಯ ಅಕ್ಷರಗಳನ್ನು ಬಿಡಿಯಾಗಿ ಮತ್ತು ಒತ್ತಾಗಿ ಗುರ್ತಿಸುವುದು ಓದುವುದು ಮತ್ತು ಬರೆಯುವುದು. | ಕಪ್ಪು ಹಲಗೆ, ಪಠ್ಯ ಪುಸ್ತಕ | ಶಿಕ್ಷಕರು | ಪೂ.ಸಿ.ಚ.<br>"ಅಮ್ಮ ಅಮ್ಮ" ಹಾಡನ್ನು ಪುನರಾವರ್ತಿಸುವರು. | **ಭಾಷೆ – ಲಟ್ಟಿಯ ಮುಟ್ಟ ಜೋಡಿ** | ಸಂಯುಕ್ತಾಕ್ಷರ ಪದಗಳು ಮತ್ತು ವಾಕ್ಯಗಳನ್ನು ಗುರ್ತಿಸುವುದು ಮತ್ತು ನಕಲು ಮಾಡುವುದು. | ಪಠ್ಯ ಪುಸ್ತಕ | ಶಿಕ್ಷಕರು | ಪೂ.ಸಿ.ಚ.<br>1 ನೇ ತರಗತಿಯವರೊಂದಿಗೆ ಪಾಲ್ಗೊಳ್ಳುವರು. | | | | | **– 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. –** |
| | 30ನಿ | | | | ಶಿಕ್ಷಕರು | ಹಂತ – 2 ರಲ್ಲಿನ ಐದೂ ಅಕ್ಷರಗಳನ್ನು ಕಪ್ಪು ಹಲಗೆಯಲ್ಲಿ ಅಂದವಾಗಿ ಬರೆಯುವರು.<br>ಪಠ್ಯ ಪುಸ್ತಕದಲ್ಲಿ ಚಿತ್ರ ಸಹಿತ ಪದಗಳನ್ನು ಓದಿಸುವರು. ಭಾಷಾಭ್ಯಾಸ ಚಟುವಟಿಕೆಗಳನ್ನು ಮಾಡಿಸುವರು.<br>ಜ, ವ, ಮ, ಬ, ನ | | | | ಹಿರೇಮಣಿ | ಪಠ್ಯಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು ಹಾಗು ಪಾಠವನ್ನು ಮಕ್ಕಳಿಂದ ಓದಿಸುವಂತೆ ಹಿರೇಮಣಿಗೆ ಸೂಚನೆ ನೀಡುವರು.<br>ಮಕ್ಕಳು ಶಿಕ್ಷಕರ ಸೂಚನೆಯನ್ನು ಪಾಲಿಸುವರು. | | | | | |
| | 10ನಿ | | | ಅಭ್ಯಾಸ ಪುಸ್ತಕ | ಶಿಕ್ಷಕರು | ಪಠ್ಯ ಪುಸ್ತಕದಲ್ಲಿರುವ ಅಕ್ಷರಗಳನ್ನು ಅಭ್ಯಾಸದ ಹಾಳೆಗಳಲ್ಲಿ ಅಂದವಾಗಿ ನಕಲು ಮಾಡುವಂತೆ ಶಿಕ್ಷಕರು ಮಾರ್ಗದರ್ಶನ ನೀಡುವರು. | **ಭಾಷೆ – ಹಾವಿನ ಹಾಡು** | ಹಾಡುಗಳು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವುದು. | ಹಾವಿನ ಚಿತ್ರ | ಶಿಕ್ಷಕರು | ಮಕ್ಕಳು ಕಲಿಕೆಗೆ ಸಿದ್ದರಾಗುವರು. | | | | | **– 3 & 4 ನೇ ತರಗತಿಯೊಂದಿಗೆ ಸಂಯೋಜನೆಯಲ್ಲಿರುತ್ತದೆ. –** |
| | 30ನಿ | | | | ಹಿರೇಮಣಿ | ಶಿಕ್ಷಕರು ಮಾರ್ಗದರ್ಶನವನ್ನು ಅನುಸರಿಸಿ ಮಕ್ಕಳು ಚಟುವಟಿಕೆಯಲ್ಲಿ ತೊಡಗುವರು. | | | | ಶಿಕ್ಷಕರು | ಹಾವಿನ ಚಿತ್ರ ತೋರಿಸಿ ಹಾವಿನ ಬಗ್ಗೆ ಮಕ್ಕಳಿಂದ ಮಾಹಿತಿ ಸಂಗ್ರಹಿಸುವರು. ಹಾವಿನ ಹಾಡು ಪದ್ಯದ ಮೊದಲ ಭಾಗವನ್ನು ಅಭಿನಯ ಸಹಿತವಾಗಿ ರಾಗವಾಗಿ ಹೇಳಿಕೊಡುವರು. ಮಕ್ಕಳು ಸಾಮೂಹಿಕವಾಗಿ ಹಾಡುವರು. | | | | | |
| 3ನೇ ಅವಧಿ | 10ನಿ | **ಸಾ.ಉ.ಉ.ಕಾ.** | ಅವಶ್ಯಕವಾದ ವಸ್ತುಗಳನ್ನು ತಯಾರಿಸುವ ಸಾಮರ್ಥ್ಯ ಹೊಂದುವುದು. | ಜೋಳದ ಕಡ್ಡಿಯ ಬೆಂಡುಗಳು ಮತ್ತು ಕಡ್ಡಿಗಳು | ಶಿಕ್ಷಕರು | ಪೂ.ಸಿ.ಚ.<br>ಸರಳ ಆಟ ಆಡಿಸುವರು. | **ಗಣಿತ ಸಂಕಲನ** | ದಶಕವಿಲ್ಲದಂತೆ ಎರಡಂಕಿಯ ಎರಡು ಅಥವಾ ಮೂರು ಸಂಖ್ಯೆಗಳ ಸಂಕಲನ ಮಾಡುವುದು. | ಅಭ್ಯಾಸ ಪುಸ್ತಕ | ಶಿಕ್ಷಕರು | **ಪೂ.ಸಿ.ಚ.** : ಸರಳ ಆಟ ಆಡಿಸುವರು<br>ಅಭ್ಯಾಸ ಪುಸ್ತಕದ ಪುಟ ಸಂಖ್ಯೆ 87 ರ ಲೆಕ್ಕಗಳನ್ನು ಮಾಡುವಂತೆ ಶಿಕ್ಷಕರು ಅಗತ್ಯ ಸೂಚನೆಗಳನ್ನು ನೀಡುವರು. | **ವಿಜ್ಞಾನ – ಎಲ್ಲ ಜೀವಿ ಸಸ್ಯಗಳಲ್ಲಿ ಪೋಷಣೆ ಮತ್ತು ಪೋಷಣೆ** | ಎಲ್ಲ ಜೀವಿ ಸಸ್ಯಗಳಲ್ಲಿ ಕಂಡುಬರುವ ಎಲ್ಲ ಸಸ್ಯಗಳ ವಿಧಗಳನ್ನು ತಿಳಿಯುವುದು. | ಗುಂಪು ಚಟುವಟಿಕೆ | ಶಿಕ್ಷಕರು | ಸರಳ ಪ್ರಶ್ನೆಗಳನ್ನು ಕೊಟ್ಟು ಉತ್ತರ ಬರೆಯಲು ಅಗತ್ಯ ಸೂಚನೆ ನೀಡುವರು. |
| | 30ನಿ | | | | ಶಿಕ್ಷಕರು | ಶಿಕ್ಷಕರು ಸ್ಥಳೀಯವಾಗಿ ದೊರಕುವ ವಸ್ತುಗಳಿಂದ (ಜೋಳದ ಕಡ್ಡಿಗಳ ಬೆಂಡುಗಳಿಂದ) ಕನ್ನಡಕ ತಯಾರಿಸಲು ಅಗತ್ಯ ಮಾರ್ಗದರ್ಶನ ಮಾಡುವರು. ಮಕ್ಕಳು ಅನುಸರಿಸುವರು.<br>ಮಕ್ಕಳು ಸುಲಭವಾಗಿ ತಯಾರಿಸಬಹುದಾದ ಕನ್ನಡಕವನ್ನು ತಯಾರಿಸುವರು. | | | | ಹಿರೇಮಣಿ | ಮಕ್ಕಳು ಪುಟ ಸಂಖ್ಯೆ 87 ರ ಲೆಕ್ಕಗಳನ್ನು ಅಭ್ಯಾಸ ಮಾಡುವರು. | | | | ಹಿರೇಮಣಿ | ಉದಾ :– ಸಸ್ಯಗಳಲ್ಲಿ ಆಹಾರ ಹೇಗೆ ತಯಾರಾಗುತ್ತದೆ ?<br>ಮೀನಿನ ಚಿತ್ರ ಬರೆದು ಭಾಗಗಳನ್ನು ಗುರ್ತಿಸುವರು ?<br>ಹಿರೇಮಣಿಯ ನೇತೃತ್ವದಲ್ಲಿ ಮಕ್ಕಳು ಪ್ರಶ್ನೆಗಳಿಗೆ ಉತ್ತರ ಬರೆಯುವರು. |
| | 10ನಿ | **ಲಲಿತಕಲೆ** | ಓದುವ ಮತ್ತು ಗುರುತಿಸುವ ಜೋಡಿಸುವ ಸಾಮರ್ಥ್ಯವನ್ನು ಹೊಂದುವುದು. | ಪದಗಳ ಮಿಂಚು ಪಟ್ಟಿ ಮತ್ತು ಚಿತ್ರಪಟಗಳು(ಚಿತ್ರಗಳು) | ಶಿಕ್ಷಕರು | ಮಕ್ಕಳು ಈ ಕೆಳಗಿನ ಚಟುವಟಿಕೆ ಮಾಡಲು ಸೂಚನೆ ನೀಡುವರು. | **ಪರಿಸರ ಅಧ್ಯಯನ – ನಮ್ಮ ದೇಹದ ಭಾಗಗಳು** | ದೇಹದ ಅಂಗಗಳನ್ನು ಗುರುತಿಸುವರು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು. | ಪಠ್ಯ ಪುಸ್ತಕ ಪುಟ ಸಂಖ್ಯೆ 27 ರ ಚಿತ್ರಗಳನ್ನು ತೋರಿಸುವರು. | ಶಿಕ್ಷಕರು | ಶಿಕ್ಷಕರು ಹಿಂದಿನ ಅವಧಿಯಲ್ಲಿ ಮಾಡಿದ ಪಾಠದ ಬಗ್ಗೆ ಪ್ರಶ್ನೆಗಳನ್ನು ಕೇಳಿ ಉತ್ತರವನ್ನು ಪಡೆಯುವರು. | **ಸಮಾಜ ವಿಜ್ಞಾನ: ನಾಗರಿಕತೆ ಆರ್ಯ** | ನಾಗರಿಕತೆ ಆರ್ಯರ ಬಗ್ಗೆ ತಿಳಿಯುವುದು. | | ಶಿಕ್ಷಕರು | ಪಠ್ಯದ ಮುಂದುವರೆದ ಭಾಗವನ್ನು ಮೌನವಾಚನ ಮಾಡಲು ಮಕ್ಕಳಿಗೆ ಸೂಚಿಸುವರು. |
| | 30ನಿ | | | | ಹಿರೇಮಣಿ | ಚಿತ್ರಗಳಿಗೆ ಅನುಗುಣವಾಗಿ ಪದಗಳನ್ನು ಪದಗಳಿಗೆ ಅನುಗುಣವಾಗಿ ಚಿತ್ರಗಳನ್ನು ಜೋಡಿಸುವಂತೆ ಶಿಕ್ಷಕರು ಸೂಚಿಸುವರು, ಮಕ್ಕಳು ಅನುಸರಿಸುವರು.<br>ಮರ, ಕೆರೆ, ಜಲ, ನಳ, ಪದಕ, ಕಳಸ, ರಥ, ನಯನ, ಕಮಲ, ಕದ, ಜಳಕ, ಬಸವ, ದರಗ ಇತ್ಯಾದಿ. | | | | ಶಿಕ್ಷಕರು | ನಂತರ ಒಂದು ಮಗುವನ್ನು ಹತ್ತಿರ ಕರೆದು ಕೈನ ಭಾಗಗಳನ್ನು ಪರಿಚಯಿಸುವರು.<br>ಉದಾ :– ತೋಳು, ಮೊಣಕೈ, ಮುಂಗೈ, ಅಂಗೈ, ಬೆರಳುಗಳು, ಉಗುರು ಇವುಗಳನ್ನು ತಿಳಿಸುವರು. (ಮಕ್ಕಳು ಅದರಂತೆ ತಮ್ಮ ಕೈಗಳಲ್ಲಿನ ಭಾಗಗಳನ್ನು ತಾವೇ ಹೇಳಿಕೊಳ್ಳುವರು. | | | | ಹಿರೇಮಣಿ | ಮಕ್ಕಳು ಋಗ್ವೇದ ಕಾಲದ ಆರ್ಥಿಕ ಜೀವನ ಇತ್ಯಾದಿಗಳ ಬಗ್ಗೆ ವಾಚನ ಮಾಡಿ ವಿಷಯ ಗ್ರಹಿಸುವರು. |